ಕರ್ನಾಟಕ ಮೂಢನಂಬಿಕೆ ಆಚರಣೆಗಳ ಪ್ರತಿಬಂಧಕ ವಿಧೇಯಕ–2013



ಭಾರತ ಜ್ಞಾನ ವಿಜ್ಞಾನ ಸಮಿತಿ, ಕರ್ನಾಟಕ

ಅಂಧಶ್ರದ್ಧೆ – ಜನವಿಜ್ಞಾನ ಚಳವಳಿಯ ಕಣ್ಣೋಟ

– ಜೈಕುಮಾರ್ ಎಚ್.ಎಸ್.

ಡಾ. ಜಿ. ರಾಮಕೃಷ್ಣ – ಒಂದು ಸಂದರ್ಶನ

ಹಾಗೂ

ಕರ್ನಾಟಕ ಮೂಢನಂಬಿಕೆ ಆಚರಣೆಗಳ ಪ್ರತಿಬಂಧಕ ವಿಧೇಯಕ 2013 –ಕರಡು

ಭಾರತ ಜ್ಞಾನ ವಿಜ್ಞಾನ ಸಮಿತಿ, ಕರ್ನಾಟಕ,
ಭಾರತೀಯ ವಿಜ್ಞಾನ ಮಂದಿರದ ಆವರಣ, ಬೆಂಗಳೂರು–12

KARNATAKA MUDHANAMBIKE ACHARANEGALA PRATHIBA-NDHAKA VIDHEYAKA - 2013 by Bhatatha Gyan Vijyan Samithi - Karnataka.

First edition- June 2014, Pages -28+4 =32,

prize- Rs. 15

ಮೊದಲ ಮುದ್ರಣ ಜೂನ್ - 2014

ಪುಟಗಳು - 28+04=32

ಕಾಗದ : 70 ಜಿಎಸ್ಎಂ ಮ್ಯಾಪ್ಲಿಥೊ

ಬೆಲೆ : ರೂ. 15

ಪ್ರತಿಗಳು : 2000

ಮುಖಪುಟ ವಿನ್ಯಾಸ : ಜಗದೀಶ್ ಸುಜ್ಜಲೂರು

ಒಳಪುಟ ವಿನ್ಯಾಸ : ಜಿ.ವಿನುತ

ಪ್ರಕಾಶಕರು : ಕಾರ್ಯದರ್ಶಿ,

ಭಾರತ ಜ್ಞಾನ ವಿಜ್ಞಾನ ಸಮಿತಿ - ಕರ್ನಾಟಕ,

ಭಾರತೀಯ ವಿಜ್ಞಾನ ಮಂದಿರದ ಆವರಣ,

ಬೆಂಗಳೂರು - 560012

ದೂ: 080-22932395, bgvskarnataka@gmail.com

ಮುದ್ರಣ:

ಪ್ರಕಾಶಕರ ನುಡಿ

ಭಾರತ ಜ್ಞಾನ ವಿಜ್ಞಾನ ಸಮಿತಿ (ಬಿ.ಜಿ.ವಿ.ಎಸ್) ಜನ ಸಾಮಾನ್ಯರಲ್ಲಿ ವೈಜ್ಞಾನಿಕ ಮನೋಭಾವ ಹಾಗೂ ವೈಚಾರಿಕತೆಯನ್ನು ಮೂಡಿಸಲು ಕೆಲಸ ಮಾಡುತ್ತಿರುವ ಜನವಿಜ್ಞಾನ ಚಳವಳಿ. 1989 ರಲ್ಲಿ ಆರಂಭವಾದ ಸಮಿತಿಗೀಗ ಬೆಳ್ಳಿ ಹಬ್ಬದ ಸಂಭ್ರಮ. ಈ ಸಂದರ್ಭದಲ್ಲಿ 25 ಹೊಸ ಪುಸ್ತಕಗಳನ್ನು ಮುದ್ರಿಸಲು ಸಮಿತಿ ನಿರ್ಧರಿಸಿದೆ. ಕೈಗೆಟಕುವ ಬೆಲೆಯಲ್ಲಿ ಉತ್ತಮ ಪುಸ್ತಕಗಳನ್ನು ನೀಡಬೇಕೆಂಬುದು ನಮ್ಮ ಬಯಕೆ.

ಮನೆಮನೆಗೆ ವಿಜ್ಞಾನವನ್ನು ಕೊಂಡೊಯ್ಯುವ ಗುರಿ ಹೊಂದಿರುವ ಬಿಜಿವಿಎಸ್ ಜನಸಾಮಾನ್ಯರ ಶ್ರೇಯೋಭಿವೃದ್ಧಿಗೆ ಬಹು ದೊಡ್ಡ ತಡೆಯಾಗಿರುವ ಅಂಧಶ್ರದ್ಧೆಗಳನ್ನು ದೂರ ಮಾಡಲು ಹಲವು ಪ್ರಯತ್ನಗಳನ್ನು ನಡೆಸುತ್ತಾ ಬಂದಿದೆ. ರಾಜ್ಯಾದ್ಯಂತ ಮೌಢ್ಯದ ವಿರುದ್ಧ ಜಾಗೃತಿ ಮೂಡಿಸುವ ಜಾಥಾಗಳನ್ನು ಸಂಘಟಿಸಿದೆ. ಬಾನಾಮತಿ, ಪವಾಡಗಳು, ಅತಿಮಾನುಷ ಕ್ರಿಯೆಗಳನ್ನು ಬಯಲಿಗೆಳೆಯುವ ಕಿರು ಪುಸ್ತಕಗಳನ್ನು ಪ್ರಕಟಿಸಿ ಜನರಲ್ಲಿ ಮನೆಮಾಡಿದ್ದ ಭೀತಿಯನ್ನು ತೊಲಗಿಸಲು ಪ್ರಯತ್ನಿಸುತ್ತಿದೆ. ಜನರ ನಡುವೆ ನಿರಂತರ ವೈಜ್ಞಾನಿಕ ಅರಿವನ್ನು ಮೂಡಿಸುವ ಕಾರ್ಯಕ್ರಮಗಳನ್ನು ಬಿಜಿವಿಎಸ್ ಸಂಘಟಿಸುತ್ತಾ ಬಂದಿದೆ.

ಇದೀಗ, ರಾಷ್ಟ್ರೀಯ ಕಾನೂನು ಶಾಲೆಯು ಸಲ್ಲಿಸಿರುವ ಮೂಢನಂಬಿಕೆಗಳ ಪ್ರತಿಬಂಧಕ ಕಾಯ್ದೆ ಕರಡು ಸರ್ಕಾರದ ಮುಂದಿದೆ. ಕರಡನ್ನು ಜಾರಿಗೆ ತರುವಂತೆ ಎಲ್ಲ ಪ್ರಗತಿಪರರು, ವಿಚಾರವಂತರು, ವೈಜ್ಞಾನಿಕ ಮನೋಭಾವವನ್ನು ಪ್ರೇರೇಪಿಸಲು ದುಡಿಯುತ್ತಿರುವ ಸಂಘ-ಸಂಸ್ಥೆಗಳು ಸರ್ಕಾರದ ಮೇಲೆ ಒಂದು ಕಡೆ ಒತ್ತಾಯ ಹೇರುತ್ತಿದ್ದರೆ ಮತ್ತೊಂದು ಕಡೆ ಕರಡನ್ನು ಅಭ್ಯಾಸ ಮಾಡದೆಯೇ ಕುರುಡಾಗಿ ವಿರೋಧ ವ್ಯಕ್ತಪಡಿಸುತ್ತಿರುವುದನ್ನೂ ಮನಗಂಡ ಬಿಜಿವಿಎಸ್ ಕರಡಿನಲ್ಲಿರುವ ನೈಜ ಅಂಶಗಳನ್ನು ಅರಿಯಲು ನೆರವಾಗಲಿ ಎನ್ನುವ ಆಶಯದೊಂದಿಗೆ ಈ ಕೃತಿಯನ್ನು ಪ್ರಕಟಿಸುತ್ತಿದೆ. ಜೊತೆಗೆ, ಚಿಂತಕರಾದ ಡಾ.ಜಿ.ರಾಮಕೃಷ್ಣ ರವರು ಕರಡಿನ ಕುರಿತಾಗಿ ನೀಡಿರುವ ಸಂದರ್ಶನದ ಭಾಗವನ್ನೂ ಈ ಹೊತ್ತಿಗೆಯಲ್ಲಿ ಪ್ರಕಟಿಸಲಾಗುತ್ತಿದೆ.

ಈ ಪುಸ್ತಕ ಪ್ರಕಟಗೊಳ್ಳಲು ಶ್ರಮಿಸಿದ ಬಿ.ಜಿ.ವಿ.ಎಸ್ ಪ್ರಕಟಣಾ ಉಪಸಮಿತಿಯ ಸಂಚಾಲಕರಾದ ಶ್ರೀ ಎಫ್.ಸಿ.ಚೇಗರಡ್ಡಿಯವರಿಗೆ, ಸಂದರ್ಶನ ನೀಡಿದ ಡಾ.ಜಿ.ಆರ್. ರವರಿಗೆ, ಟಿಪ್ಪಣಿ ರಚಿಸಿಕೊಟ್ಟ ಹೆಚ್.ಎಸ್.ಜಯಕುಮಾರ್ ರವರಿಗೆ ಪ್ರಕಟಣಾ ಉಪಸಮಿತಿಯ ಸದಸ್ಯರಿಗೆ ಈ ಪುಸ್ತಕದ ಮುಖಪುಟ ವಿನ್ಯಾಸಗೊಳಿಸಿದ ಗೆಳೆಯ ಜಗದೀಶ್ ಸುಜ್ಜಲೂರು ಪುಟ ವಿನ್ಯಾಸ ಮಾಡಿದ ಗೆಳತಿ ಜಿ.ವಿನುತಾ ರವರಿಗೂ ಹಾಗೂ ಮುದ್ರಕರಿಗು ಧನ್ಯವಾದಗಳು.

ಎಂದಿನಂತೆ ಪುಸ್ತಕದ ಕುರಿತ ತಮ್ಮ ಮುಕ್ತ ಅಭಿಪ್ರಾಯಗಳಿಗೆ ಸ್ವಾಗತ.

ಎನ್. ಪ್ರಭಾ, ಕಾರ್ಯದರ್ಶಿ

ಅಂಧಶ್ರದ್ಧೆ – ಜನವಿಜ್ಞಾನ ಚಳವಳಿಯ ಕಣ್ಣೋಟ

ರಾಷ್ಟ್ರೀಯ ಕಾನೂನು ಶಾಲೆ (ಎನ್‌ಎಲ್‌ಎಸ್‌ಐಯು) ರಾಜ್ಯ ಸರ್ಕಾರಕ್ಕೆ ಸಲ್ಲಿಸಿರುವ 'ಕರ್ನಾಟಕ ಮೂಢನಂಬಿಕೆ ಆಚರಣೆಗಳ ಪ್ರತಿಬಂಧಕ ವಿಧೇಯಕ, 2013'ರ ಪರ ಮತ್ತು ವಿರುದ್ಧ ಬಿರುಸಾದ ಚರ್ಚೆಗಳು ನಡೆಯುತ್ತಿವೆ. ಈ ಕುರಿತು ವಿಜ್ಞಾನ ಚಳುವಳಿಗಳು ಸೂಕ್ತ ರೀತಿಯಲ್ಲಿ ಪ್ರತಿಕ್ರಿಯಿಸುವ ಮತ್ತು ಮಧ್ಯಪ್ರವೇಶಿಸುವ ಅವಶ್ಯಕತೆ ಇದೆ.

ವಿಚಾರವಾದಿ ಡಾ: ನರೇಂದ್ರ ದಾಬೋಲ್ಕರ್ ಕಗ್ಗೊಲೆ:
ಮೂಢನಂಬಿಕೆ ವಿರೋಧಿ ಕಾನೂನುಗಳಿಗೆ ಚಾಲನೆ

ಮೂಢನಂಬಿಕೆ, ಅಂಧಶ್ರದ್ಧೆ, ಕಂದಾಚಾರ ಹಾಗೂ ಜಾತಿ ತಾರತಮ್ಯಗಳ ವಿರುದ್ಧ ಮಹಾರಾಷ್ಟ್ರದಲ್ಲಿ ಕಳೆದ 25 ವರ್ಷಗಳಿಂದ ಹೋರಾಟ ಮಾಡುತ್ತಿದ್ದ ಖ್ಯಾತ ವಿಚಾರವಾದಿ ಡಾ: ನರೇಂದ್ರ ದಾಭೋಲ್ಕರ್ ರವರನ್ನು ಸಮಾಜಘಾತುಕ ಶಕ್ತಿಗಳು ಗುಂಡಿಕ್ಕಿ ಕೊಂದಿದ್ದಾರೆ. 20.08.2013 ರಂದು ವಾಯುವಿಹಾರಕ್ಕೆ ಹೋಗಿದ್ದಾಗ ಅವರ ಹತ್ಯೆಯಾಯಿತು. ಅವರನ್ನು ಮಾಯ, ಮಾಟ, ಮಂತ್ರಗಳಿಂದ ಕೊಲ್ಲಲಾಗಿಲ್ಲ ಬಂದೂಕನ್ನೇ ಬಳಸಿ ಅವರ ಕಗ್ಗೊಲೆ ನಡೆದಿದೆ!

ಡಾ: ನರೇಂದ್ರ ದಾಬೋಲ್ಕರ್ ರವರು ಮೂಲತಃ ವೈದ್ಯರಾಗಿದ್ದು, ಸಮಾಜವನ್ನು ಕಾಡುತ್ತಿರುವ ಮೂಢನಂಬಿಕೆ, ಅಂಧಶ್ರದ್ಧೆ, ಕಂದಾಚಾರ, ಜಾತಿ ತಾರತಮ್ಯ, ಲಿಂಗತಾರತಮ್ಯ ಮುಂತಾದ ಪಿಡುಗುಗಳ ವಿರುದ್ಧ ಹೋರಾಡುವ ಸಲುವಾಗಿ ತಮ್ಮ ಜೀವನವನ್ನೇ ಅರ್ಪಿಸಿಕೊಂಡಿದ್ದರು. ಹಳ್ಳಿ ನಗರಗಳೆಂಬ ವ್ಯತ್ಯಾಸವಿಲ್ಲದೆ ಮೂಲೆ ಮೂಲೆಗಳಿಗೆ ತಲುಪಿ ಬಾಬಾಗಳು, ಸ್ವಯಂಘೋಷಿತ ದೇವಮಾನವರು ಮತ್ತು ಧಾರ್ಮಿಕ ಹೆಸರಿನಲ್ಲಿ ಜನರಿಗೆ ಮೋಸ ಮಾಡುತ್ತಿದ್ದ ವಂಚಕರನ್ನು ಬಯಲಿಗೆಳೆಯುತ್ತಿದ್ದರು. ಅವರ ಮೇಲೆ ಹಲವಾರು ಬಾರಿ ದೈಹಿಕ ದಾಳಿಗಳೂ ನಡೆದಿದ್ದವು. ಅಂಧಶ್ರದ್ಧೆಗಳ ವಿರುದ್ಧ ಹೋರಾಡುವ ಸಲುವಾಗಿ 'ಮಹಾರಾಷ್ಟ್ರ ಅಂಧಶ್ರದ್ಧೆ ನಿರ್ಮೂಲನಾ ಸಮಿತಿ' ಎಂಬ ಸಂಘಟನೆಯನ್ನೂ ಸ್ಥಾಪಿಸಿದ್ದರು.

ಗಣೇಶನ ಹಬ್ಬದ ಸಂದರ್ಭದಲ್ಲಿ ರಾಸಾಯನಿಕ ವಸ್ತುಗಳನ್ನು ಬಳಸಿಕೊಂಡು ಮಾಡುವ ವಿಗ್ರಹಗಳು ಪರಿಸರಕ್ಕೆ ಮಾರಕವಾಗಿರುವುದರಿಂದ ನೈಸರ್ಗಿಕ ಬಣ್ಣ ಮತ್ತು ಮಣ್ಣು ಬಳಸಿದ ವಿಗ್ರಹಗಳನ್ನೇ ಬಳಸಬೇಕೆಂದು ಹೈಕೋರ್ಟ್‌ವರೆಗೂ ಕಾನೂನು ಹೋರಾಟ ನಡೆಸಿ ಪರಿಸರ-ಸ್ನೇಹಿ ತೀರ್ಪು ಹೊರಬೀಳುವಲ್ಲಿಯೂ ಅವರು ಯಶಸ್ವಿಯಾಗಿದ್ದರು. ಹಳ್ಳಿಗಳಲ್ಲಿ ಎಲ್ಲಾ ಜನಜಾತಿಯವರಿಗೂ ಒಂದೇ ಕಡೆ ನೀರು ನೀಡದಿರುವ ಜಾತಿ ತಾರತಮ್ಯದ ವಿರುದ್ಧ 'ಒಂದು ಹಳ್ಳಿ, ಒಂದು ಬಾವಿ' ಘೋಷಣೆ ಮೊಳಗಿಸಿ ಚಟುವಟಿಕೆಗಳನ್ನು ನಡೆಸುತ್ತಿದ್ದರು. ಜ್ಯೋತಿ ಬಾ ಫುಲೆ - ಸಾಹು -ಅಂಬೇಡ್ಕರ್ ರವರ ವಿಚಾರಧಾರೆಗಳಿಂದ ದಾಭೋಲ್ಕರ್ ಪ್ರೇರಿತರಾಗಿದ್ದರು. ವೈಚಾರಿಕ ಲೇಖನಗಳನ್ನೊಳಗೊಂಡ ವಾರಪತ್ರಿಕೆ 'ಸಾಧನಾ' ದ ಸಂಪಾದಕರಾಗಿದ್ದರು. ಗಾಂಧಿಯನ್ನು ಹತ್ಯೆ ಮಾಡಿದ ಮತಾಂಧ ಮನಸ್ಸುಗಳೇ ದಾಭೋಲ್ಕರ್ ರವರನ್ನೂ ಅಂತಿಮವಾಗಿ

ಬಲಿತೆಗೆದುಕೊಂಡುಬಿಟ್ಟವು. ಅಂಧಶ್ರದ್ಧೆ ನಿರ್ಮೂಲನೆಗಾಗಿ ಮಸೂದೆಯೊಂದನ್ನು ಜಾರಿಗೆ ತರಬೇಕೆಂದು ಕಳೆದ 18 ವರ್ಷಗಳಿಂದ ದಾಭೋಲ್ಕರ್ ಹೋರಾಡುತ್ತಿದ್ದರೂ ಅದನ್ನು ಕಡೆಗಣಿಸಿದ್ದ ಮಹಾರಾಷ್ಟ್ರ ಸರ್ಕಾರ ಅವರು ಸತ್ತ 3 ದಿನದೊಳಗೆ ಸುಗ್ರೀವಾಜ್ಞೆಯನ್ನು ಜಾರಿಗೆ ತಂದಿತು! ಇದನ್ನನುಸರಿಸಿ ಕರ್ನಾಟಕ ಸರ್ಕಾರವೂ ಸಹ ಅಂಧಶ್ರದ್ಧೆ ನಿರ್ಮೂಲನೆಗಾಗಿ ಕಾಯ್ದೆ ರೂಪಿಸುವ ಭರವಸೆಯನ್ನು ಜನತೆಗೆ ನೀಡಿತು. ರಾಷ್ಟ್ರೀಯ ಕಾನೂನು ಶಾಲೆಗೆ ಕರಡು ಮಸೂದೆಯನ್ನು ಸಿದ್ಧಪಡಿಸುವ ಜವಾಬ್ಧಾರಿಯನ್ನೂ ವಹಿಸಿಕೊಟ್ಟಿತು.

ಮೂಢನಂಬಿಕೆ ಮತ್ತು ಅಂಧಶ್ರದ್ಧೆ ವಿರುದ್ದದ ಹೋರಾಟ ಮತ್ತು ವಿಚಾರವಾದಿಗಳು:

ಮೂಢನಂಬಿಕೆ ಮತ್ತು ಅಂಧಶ್ರದ್ಧೆಗಳನ್ನು ಬೆಳೆಸಿ ಜನರನ್ನು ವಂಚಿಸುವ ಹಾಗೂ ಶೋಷಣೆ ಮಾಡುವ, ಆ ಮೂಲಕ ಸಮಾಜದಲ್ಲಿ ಹಣ ಮತ್ತು ಅಧಿಕಾರ ಗಳಿಸುವ ಶಕ್ತಿಗಳಿಗೆ ಯಾವಾಗಲೂ ಸ್ವತಂತ್ರ ಆಲೋಚನೆಯ, ತರ್ಕಿಸುವ ಮತ್ತು ಪ್ರಶ್ನಿಸುವ ಮನೋಭಾವದ ವೈಚಾರಿಕತೆ ಶತ್ರುವೇ ಸರಿ. ಇಂಥಹ ಮೂಢನಂಬಿಕೆಗಳು ಮತ್ತು ಕಂದಾಚಾರಗಳ ಕುರಿತಾಗಿ ವಿಚಾರವಾದಿಗಳ ಚಟುವಟಿಕೆಗಳಿಗೆ ಹೋಲಿಸಿದರೆ ಜನವಿಜ್ಞಾನ ಚಳುವಳಿಗೆ ತನ್ನದೇ ಆದ ಕಣ್ಣೋಟವಿದೆ. ಮೂಢನಂಬಿಕೆ ಮತ್ತು ಅಂಧಶ್ರದ್ಧೆಗಳ ಮೂಲ ಬೇರುಗಳು ತಿಳುವಳಿಕೆಯ ಕೊರತೆ ಅಥವಾ ಅಜ್ಞಾನ ಹಾಗೂ ಸಮಾಜದ ರಚನೆಯಲ್ಲಿ ಅಡಗಿದೆ. ಒಂದೆಡೆ ಅಜ್ಞಾನದಿಂದ ಮೂಢನಂಬಿಕೆ ಮತ್ತು ಅಂಧಶ್ರದ್ಧೆಗಳು ಬೆಳೆದರೆ, ಮತ್ತೊಂದೆಡೆ ಸಮಾಜದ ರಚನೆ ಅಂದರೆ ಸಮಾಜದಲ್ಲಿರುವ ಪಟ್ಟಭದ್ರ ಹಿತಾಸಕ್ತಿಗಳು ಮೂಢನಂಬಿಕೆಯನ್ನು ಮತ್ತಷ್ಟು ಪೋಷಿಸುತ್ತವೆ ಮಾತ್ರವಲ್ಲ ವಿಜ್ಞಾನದ ಕುರಿತು ಅಪನಂಬಿಕೆ ಹುಟ್ಟಿಸಲು ಸದಾ ಯತ್ನಿಸುತ್ತವೆ. ಸಮಾಜದ ರಚನೆ ಬದಲಾದಂತೆ ನಂಬಿಕೆಗಳೂ ಬದಲಾಗುತ್ತವೆ. ಸಮಾಜ ರಚನೆಯನ್ನು ಆಮೂಲಾಗ್ರ ಬದಲಿಸುವ, ಉಳ್ಳವರು ಮತ್ತು ಇಲ್ಲದವರ ಸಂಘರ್ಷ, ಹೋರಾಟಗಳ ಜೊತೆಗೆ ಮೂಢನಂಬಿಕೆ ಮತ್ತು ಕಂದಾಚಾರಗಳ ವಿರುದ್ದದ ಹೋರಾಟವನ್ನೂ ಬೆಸೆಯಬೇಕು. ವೈಜ್ಞಾನಿಕ ಮನೋಭಾವ ಬೆಳೆಸಲು ಶ್ರಮಿಸುತ್ತಾ ಮೂಢನಂಬಿಕೆ ಮತ್ತು ಕಂದಾಚಾರಗಳ ಕುರಿತು ಜನತೆಯ ನಡುವೆ ಜಾಗೃತಿ ಮೂಡಿಸಿ ಅವುಗಳನ್ನು ತೊಡೆಯಬೇಕು ಎನ್ನುವುದು ಜನವಿಜ್ಞಾನ ಚಳುವಳಿಯ ಕಣ್ಣೋಟ. ಸಮಾಜರಚನೆಯ ಬದಲಾವಣೆಗೆ ಕೈಹಾಕದೆ ಆ ಸಮಾಜದ ಮೂಢನಂಬಿಕೆ ಮತ್ತು ಕಂದಾಚಾರಗಳನ್ನು ಮಾತ್ರವೇ ಪ್ರಶ್ನಿಸುವುದರಿಂದ ಅವುಗಳನ್ನು ತೊಡೆದು ಹಾಕುವುದು ಸಾಧ್ಯವಿಲ್ಲ ಎಂಬುದನ್ನು ವಿಚಾರವಾದಿಗಳಾದಿಯಾಗಿ ಎಲ್ಲರೂ ಮನಗಾಣಬೇಕಿದೆ.

ಆದರೆ ಡಾ: ನರೇಂದ್ರ ದಾಭೋಲ್ಕರ್‌ರವರ ವೈಶಿಷ್ಟ್ಯ ಇರುವುದೇ ಇಲ್ಲಿ. ಅವರು ವಿಚಾರವಾದಿಯಾಗಿ ಜಾತಿ ಪದ್ಧತಿಯ ವಿರುದ್ಧ ಹೋರಾಟವನ್ನೂ ಕೂಡ ಮೂಢನಂಬಿಕೆ ಮತ್ತು ಕಂದಾಚಾರ ವಿರುದ್ಧ ಹೋರಾಟಗಳ ಜೊತೆಗೆ ಬೆಸೆದಿದ್ದರು. ಡಾ: ನರೇಂದ್ರ ದಾಭೋಲ್ಕರ್ ರವರ ಮೇಲಿನ ಧಾಳಿ ಪ್ರತ್ಯೇಕ ಘಟನೆಯೇನಲ್ಲ. ಇತ್ತೀಚಿನ ವರ್ಷಗಳಲ್ಲಿ ವೈಚಾರಿಕತೆ, ವೈಜ್ಞಾನಿಕ ಮನೋಭಾವ, ಪ್ರಗತಿಪರ ವಿಚಾರಗಳು, ಇತ್ಯಾದಿಗಳ ಮೇಲೆ ತೀವ್ರಗೊಳ್ಳುತ್ತಿರುವ ಸರಣಿ ಧಾಳಿಗಳ ಪೈಕಿ ಅದೂ ಒಂದಷ್ಟೆ. ಪ್ರಗತಿಪರ ರಂಗಕರ್ಮಿ ಸಪ್ಧಾರ್ ಹಶ್ಮಿಯನ್ನು ಹಾಡು ಹಗಲೇ ಕೊಂದದ್ದು, ಕಲಾವಿದ ಎಂ.ಎಫ್ ಹುಸೇನ್ ರವರ ಕಲಾಕೃತಿಗಳನ್ನು ನಾಶಮಾಡಿ ಹತ್ಯೆ ಮಾಡಲು ಯತ್ನಿಸಿದ್ದು, ಹಲವು ಬರಹಗಾರರು, ಕಲಾವಿದರು, ಕಾರ್ಟೂನಿಸ್ಟರ ಮೇಲೆ, ಮಾಹಿತಿ ಹಕ್ಕು ಕಾರ್ಯಕರ್ತರ ಮೇಲೆ ನಿರಂತರವಾಗಿ ನಡೆಯುತ್ತಿರುವ ಸರಣಿ ಧಾಳಿಗಳಲ್ಲಿ ಇದೊಂದಷ್ಟೆ. ಇದು ಬೆಳೆಯುತ್ತಿರುವ ಧಾರ್ಮಿಕ ಮೂಲಭೂತವಾದ ಮತ್ತು ಕೋಮುವಾದವನ್ನು ತೋರಿಸುತ್ತದೆ.

ಇಲ್ಲಿ, 16ನೇ ಶತಮಾನದ ಖ್ಯಾತ ವಿಚಾರವಾದಿ ಜಿಯಾರ್ಡಿನೊ ಬ್ರುನೋ ಗಲ್ಲಿಗೇರಿಸಿದ ಘಟನೆ ನೆನಪಿಸಿಕೊಳ್ಳಬಹುದು. ಆತ ವಿಚಾರವಾದಿ ಮಾತ್ರವೇ ಅಲ್ಲ, ಖಗೋಳವಿಜ್ಞಾನದಲ್ಲಿ ಕೊಪರ್ನಿಕಸ್‌ಗಿಂತಲೂ ಒಂದು ಹೆಜ್ಜೆ ಮುಂದೆ ಹೋಗಿ ಸೂರ್ಯಕೇಂದ್ರಿತ ಮಾದರಿಯನ್ನು ಜನಪ್ರಿಯಗೊಳಿಸಿ, ಸೂರ್ಯ ಕೂಡ ಒಂದು ನಕ್ಷತ್ರ, ನಮ್ಮ ವಿಶ್ವದಲ್ಲಿ ಹಲವಾರು ನಕ್ಷತ್ರಗಳು, ಗ್ರಹಗಳು ಹೀಗೆ ವ್ಯವಸ್ಥಿತವಾಗಿ ಭೌತಿಕ ನಿಯಮಾನುಸಾರ ಅಸ್ತಿತ್ವದಲ್ಲಿದೆ ಎಂದಿದ್ದ. ಇಂಥಹ ಪ್ರಭುತ್ವ–ವಿರೋಧಿ ವಿಚಾರಗಳಿಂದ ಕ್ರೋಧಗೊಂಡ ರೋಮನ್ ಪ್ರಭುತ್ವ ಅವನನ್ನು ಗಲ್ಲಿಗೇರಿಸಿತ್ತು.

1958 ರಲ್ಲಿ ಭಾರತದ ಮೊದಲ ಪ್ರಧಾನಿ ಪಂಡಿತ್ ನೆಹರೂ ರವರು 'ವಿಜ್ಞಾನ ನೀತಿ ನಿರ್ಣಯ' ವೊಂದನ್ನು ಲೋಕಸಭೆಯಲ್ಲಿ ಮಂಡಿಸಿ 'ಇದು ದೇಶಕ್ಕೆ ವಿಜ್ಞಾನದ ಸಾಧನಗಳನ್ನು ನೀಡಲಿದ್ದು, ಭೌತಿಕ ತಿಳುವಳಿಕೆ ವಿಸ್ತರಿಸುತ್ತದೆ. ಜೀವನದ ಮೌಲ್ಯಗಳು ಉತ್ತಮಗೊಳ್ಳುತ್ತವೆ. ಇದು ಭಾರತೀಯ ನಾಗರೀಕತೆಗೆ ಹೊಸ ಚೈತನ್ಯ ಮತ್ತು ನವನವೀನ ಶಕ್ತಿ ನೀಡುತ್ತದೆ.' ಎಂದಿದ್ದರು. ಈ ಕುರಿತಾದ ಚರ್ಚೆಗೆ ಅಂದಿನ ಲೋಕಸಭಾ ಸದಸ್ಯರೆಲ್ಲರು ಬಹಳ ಸಮಯ ನೀಡಿದ್ದರು.

ಅಲ್ಲದೆ, ನಮ್ಮ ಸಂವಿಧಾನದ ವಿಧಿ 51 ಎ(ಹೆಚ್) ವೈಜ್ಞಾನಿಕ ಮನೋಭಾವದ ಕುರಿತು ಈ ರೀತಿ ಹೇಳುತ್ತದೆ: ದೇಶದ ಪ್ರತಿಯೊಬ್ಬ ನಾಗರೀಕನೂ ವೈಜ್ಞಾನಿಕ ಮನೋಭಾವ, ಮಾನವೀಯತೆ ಮತ್ತು ವೈಚಾರಿಕ ಮನೋಭಾವವನ್ನು ಅಭಿವೃದ್ಧಿ ಪಡಿಸುವ ಜವಾಬ್ದಾರಿ ಹೊಂದಿರತಕ್ಕದ್ದು.

ಆದರೆ, ಡಾ: ನರೇಂದ್ರ ದಾಭೋಲ್ಕರ್‌ರವರು ಈ ಆಶಯಗಳನ್ನು ಜಾರಿಗೊಳಿಸುವಾಗಲೇ ಬಲಿಯಾದದ್ದು ಸಂವಿಧಾನದ ಮೇಲಿನ ಧಾಳಿಯಷ್ಟೆ.

ಸಂವಿಧಾನಪ್ರಿಯರಾದ ನಾವೆಲ್ಲರೂ ಈ ಹತ್ಯೆಯನ್ನು ಒಕ್ಕೊರಲಿನಿಂದ ಖಂಡಿಸೋಣ. ಹಾಗೆಯೇ ವೈಜ್ಞಾನಿಕ ಮನೋಭಾವ ಹರಡುತ್ತಾ ಮೂಢನಂಬಿಕೆಗಳು ಮತ್ತು ಅಂಧಶ್ರದ್ದೆಗಳ ವಿರುದ್ದ ಜಾಗೃತಿ ಮೂಡಿಸಿ ಅವುಗಳನ್ನು ತೊಡೆದುಹಾಕಲು ಶ್ರಮಿಸೋಣ. ಈ ಆಶಯಗಳಿಗೆ ಪೂರಕವಾದ ಮೂಢನಂಬಿಕೆ ವಿರುದ್ದದ ಕಾನೂನು ಜಾರಿಗಾಗಿ ಒತ್ತಾಯಿಸೋಣ.

****

2. ಮೂಢನಂಬಿಕೆ ಪ್ರತಿಬಂಧಕ (ಕರಡು) ಕಾಯಿದೆ ಯ ಸಮಿತಿ ಅಧ್ಯಕ್ಷರಾಗಿದ್ದ ಚಿಂತಕ ಡಾ: ಜಿ. ರಾಮಕೃಷ್ಣ ಅವರೊಂದಿಗಿನ ಸಂದರ್ಶನ

ಮೂಢನಂಬಿಕೆಗಳನ್ನು ನಿಷೇಧಿಸುವ ಕಾಯ್ದೆಯ ಬಗೆಗೆ ಕಾಯ್ದೆಯ ಪರವಾಗಿ ಮತ್ತು ವಿರೋಧವಾಗಿ ರಾಜ್ಯದಲ್ಲಿ ವ್ಯಾಪಕವಾದ ಚರ್ಚೆಯಾಗುತ್ತಿದೆ. ಕಾಯ್ದೆಯು ಜನರ ನಂಬಿಕೆ ನಿಯಂತ್ರಿಸಲು ಹೊರಟಿದೆ. ಕಾಯ್ದೆಯಿಂದ ಜನರ ಧಾರ್ಮಿಕ ಹಕ್ಕುಗಳಿಗೆ ಧಕ್ಕೆಯಾಗುತ್ತದೆ ಎಂಬ ಟೀಕೆಗಳಿಂದ ಹಿಡಿದು ಈ ಕಾಯ್ದೆಯು 'ಬಹುಸಂಖ್ಯಾತ ಹಿಂದೂಗಳ ಮೇಲಿನ ದಾಳಿ', 'ಹಿಂದೂ ಧರ್ಮದ ಮೇಲಿನ ಹಲ್ಲೆ' ಎಂಬಲ್ಲಿಯವರೆಗೆ ಬಹಳಷ್ಟು ಟೀಕೆಗಳು, ವಿರೋಧಗಳು ವ್ಯಕ್ತವಾಗುತ್ತಿರುವ ಹಿನ್ನೆಲೆಯಲ್ಲಿ 'ಹೊಸತು' ಪತ್ರಿಕೆಯ ಸಂಪಾದಕರು ಹಾಗೂ ಚಿಂತಕರೂ ಆದ ಡಾ. ಜಿ. ರಾಮಕೃಷ್ಣ ಅವರು ಪತ್ರಿಕೆಯೊಂದಕ್ಕೆ ನೀಡಿದ್ದ ಸಂದರ್ಶನದ ಆಯ್ದ ಭಾಗವನ್ನಿಲ್ಲಿ ಪ್ರಕಟಿಸಲಾಗುತ್ತಿದೆ. ಡಾ. ಜಿ.ಆರ್. ಅವರು ಈ ಕಾಯ್ದೆಯ ಕರಡು ಸಿದ್ಧಗೊಳ್ಳುವ ಪ್ರಕ್ರಿಯೆಯಲ್ಲಿ ಪಾಲ್ಗೊಂಡವರು.

ಪ್ರಶ್ನೆ: ಪ್ರಸ್ತಾಪಿತ ಮೂಢನಂಬಿಕೆ ನಿಷೇಧ ಕಾಯ್ದೆಯ ಮುಖ್ಯ ಉದ್ದೇಶಗಳೇನು?

ಡಾ. ಜಿ.ಆರ್: ನಮ್ಮ ಭಾರತೀಯ ಪರಂಪರೆಯಲ್ಲೇ 'ಕಾರ್ಯಕಾರಣ ಭಾವ' ಎಂಬುದಕ್ಕೆ ಪ್ರಧಾನ್ಯತೆ ಕೊಡಲಾಗಿದೆ. ಬೌದ್ಧ, ಸಾಂಖ್ಯ, ಚಾರ್ವಾಕ, ಲೋಕಾಯತ, ಶರಣ ಪರಂಪರೆ ಮುಂತಾದವುಗಳೂ ಈ 'ಕಾರ್ಯಕಾರಣ ಭಾವ' ಆಧರಿಸಿವೆ. ಅದೇ ತತ್ವವೇ ಈ ಕಾಯ್ದೆಯ ಒಂದು ಮುಖ್ಯ ಆಧಾರ. ಅಂದರೆ ನಾವು ಮಾಡುತ್ತಿರುವುದರ ಅರ್ಥ ಏನು? ಅದರಿಂದ ಉದ್ದೇಶಿತ ಗುರಿ ಈಡೇರುವುದೇ ಎಂಬ 'ಕಾರ್ಯ' ಮತ್ತು 'ಕಾರಣ'ಗಳ ಸಂಬಂಧಗಳ ಕುರಿತ ವಿವೇಚನೆ. ಆದರೆ ಇಲ್ಲಿ ಜನರ ನಂಬಿಕೆಯ ಪ್ರಶ್ನೆ ಬರುತ್ತದೆ. ಜನರ ನಂಬಿಕೆಗಳನ್ನು ಯಾರೂ ನಿಯಂತ್ರಿಸಲಾಗದು. ಯಾರಿಗೂ ಅಪಾಯವಿಲ್ಲದಂತಹ, ಬೇರೆ ವ್ಯಕ್ತಿಗೆ ಘಾಸಿಯಾಗದಂತಹ ನಂಬಿಕೆಯನ್ನು ಇಟ್ಟುಕೊಳ್ಳುವುದಕ್ಕೆ ಮತ್ತು ಆಚರಿಸುವುದಕ್ಕೆ ಜನರು ಸ್ವತಂತ್ರರು.

ಯಾವುದೇ ಆಚರಣೆ 'ಮನುಷ್ಯತ್ವದ ಘನತೆಗೆ ಚ್ಯುತಿ' ತರುವಂತಿದ್ದರೆ ಅದನ್ನು ನಿಷೇಧಿಸಬೇಕಾಗುತ್ತದೆ. ನರಬಲಿ, ಅಘೋರಿ, ಸಿದ್ದುಭುಕ್ತಿ, ಮಾಟ, ಸಿಡಿ, ಗಾವು ಸಿಗಿತ, ಬೆತ್ತಲೆ ಸೇವೆ ಮುಂತಾದವು. 'ಮಡೆಸ್ನಾನ' ದಂತಹ ಆಚರಣೆ ಸಂದರ್ಭದಲ್ಲಿ 'ಜನರೇ ಮಾಡುತ್ತಿದ್ದಾರೆ' ಎಂಬುದು ಈ ಆಚರಣೆಯ ಸಮರ್ಥನೆಗೆ ಆಧಾರ ಆಗುವುದಿಲ್ಲ. ಅದು ಜನರ ಪ್ರಜ್ಞೆಗೆ ಸಂಬಂಧಪಟ್ಟ ವಿಚಾರ. ಜ್ಯೋತಿ ಬಾಪುಲೆಯಂತಹವರು ಬರುವ ಮುಂಚೆ ಅಸ್ಪೃಶ್ಯತೆಯನ್ನು ಅಸ್ಪೃಶ್ಯ ಜನರೇ ಒಪ್ಪಿಕೊಂಡು ಆಚರಿಸುತ್ತಿದ್ದರು. ಚರಿತ್ರೆಯಲ್ಲಿ ಇವುಗಳು ಆಚರಣೆಗೇಕೆ ಬಂದಿವೆ ಎಂದು ನೋಡುವುದು ಮುಖ್ಯ.

ಮಲೆಕುಡಿಯರೇ ಯಾಕೆ ಹೆಚ್ಚಾಗಿ ಮಡೆಸ್ನಾನ ಆಚರಿಸುತ್ತಾರೆ? ಅವರು ಪ್ರಶ್ನೆ ಕೇಳಬಾರದು– ಅಂತಹ ಸ್ಥಿತಿಯಲ್ಲಿ ಇರಬೇಕು. 15 ರೂಪಾಯಿ ಕೂಲಿಗೆ ಕೆಲಸ ಮಾಡುತ್ತಾರೆ, ಅವರು ಹಾಗೇ ಮುಂದುವರೆಯಬೇಕು ಹೆಚ್ಚು ಕೂಲಿ ಕೇಳಬಾರದು. ಎಂಜಲ ಮೇಲೆ ಉರುಳಾಡುವುದರಿಂದ ಕುಷ್ಠರೋಗ ವಾಸಿಯಾಗುತ್ತದೆ ಎಂದು ಮಡೆಸ್ನಾನ ಸಮರ್ಥಿಸುವವರು ತಾವೇ ಬಂದು ಅಲ್ಲಿ ಉರುಳಾಡುತ್ತಾರೋ ? ಇದನ್ನು ಪೇಜಾವರರೂ ಸಮರ್ಥನೆ ಮಾಡುತ್ತಾರೆ, ಕುಷ್ಠರೋಗ ಹಿಡಿದಿರುವುದು ಪೇಜಾವರರ ಮಿದುಳಿಗೆ. ಅವರು ಎಲ್ಲಿ ಹೋಗಿ ಉರುಳಿದರೂ ಅದು ವಾಸಿಯಾಗುವುದಿಲ್ಲ.

ಮೂಢನಂಬಿಕೆ ಎಂಬುದು ಬರೀ ನಂಬಿಕೆಯಲ್ಲ. ಅದು ಜನರು ಪ್ರಶ್ನೆ ಮಾಡದಿರುವಂತೆ ಕಲ್ಪಿಸಿಕೊಂಡಿರುವ ಸಾಧನ. ಮೂಢನಂಬಿಕೆಗಳನ್ನು ಉದ್ದೇಶಪೂರ್ವಕವಾಗಿ ಬೆಳೆಸಲಾಗಿದೆ. ಮೂಢನಂಬಿಕೆಗೆ ಬಲಿಯಾದ ವ್ಯಕ್ತಿಗೆ ಈ ಆಚರಣೆಯೊಂದಿಗೆ ಸಮ್ಮತಿ ಇತ್ತು ಅನ್ನುವುದು ಕೂಡ ಒಪ್ಪಲಾಗದಂತಹ ವಾದ.

ಜನರ ಪ್ರಜ್ಞಾವಲಯವನ್ನು ವಿಸ್ತರಿಸಲು ನಾವು ಏನು ಮಾಡಬೇಕು ಎಂಬುದು ಮುಖ್ಯ. ಸರ್ಕಾರ ಒಂದು ಒಳ್ಳೆಯ ಆಸ್ಪತ್ರೆಯನ್ನು ಕಟ್ಟಿಸಿ ಅಲ್ಲಿ ವೈದ್ಯರು ಬಂದ ರೋಗಿಗಳನ್ನ ಸರಿಯಾಗಿ ಮಾತನಾಡಿಸಿ ಚಿಕಿತ್ಸೆ–ಔಷಧಿಕೊಟ್ಟರೆ ಕ್ರಮೇಣ ಜನರು ಆಸ್ಪತ್ರೆಗೆ ಬರುತ್ತಾರೆ. ಅವರು (ಬೆಂಗಳೂರಿನ) 'ಕಾಟನ್ ಪೇಟೆ'ಯಲ್ಲಿ ಹೋಗಿ ಕ್ಯೂ ನಿಂತು ಯಂತ್ರ–ತಾಯತ ಕಟ್ಟಿಸುವುದು ತಪ್ಪುತ್ತದೆ.

ಐಟಿ ವಲಯದಲ್ಲಿ ಉದ್ಯೋಗದ ಅಸ್ಥಿರತೆ ಇದೆ. ಕೆಲಸ ಹೋಗಬಾರದು. ಅತಂತ್ರ ಸ್ಥಿತಿಯಲ್ಲಿರುವ ಅವರಿಗೆ ಆತು ಕೊಳ್ಳಲು ಏನಾದರೂ ಬೇಕು. ಮೂಢನಂಬಿಕೆಗಳಿಗೆ ಜೋತು ಬೀಳುತ್ತಾರೆ. ಜನರ ಜೀವನದ ಅಭದ್ರತೆ ನಿವಾರಿಸುವುದು ಮುಖ್ಯ.

ಪ್ರಶ್ನೆ: ಈ ಕಾಯ್ದೆ ಹಿಂದೂ ಧರ್ಮದ ವಿರುದ್ಧ ಹಲ್ಲೆ, ಬಹುಸಂಖ್ಯಾತರ ನಂಬಿಕೆಯ ಮೇಲಿನ ಧಾಳಿ ಅಂತ ಬಹಳ ಪ್ರಚಾರ ನಡೆದಿದೆಯಲ್ಲ.

ಡಾ. ಜಿ.ಆರ್: ಕಾಯ್ದೆಯು ಯಾವುದೇ ಒಂದು ಧರ್ಮದ ವಿರುದ್ಧ ಇಲ್ಲ. ಅದು ಸ್ಪಷ್ಟವಾಗಿದೆ. ಕಾಯ್ದೆಯ ಕರಡಿನಲ್ಲಿ 'ಕಾನೂನಿನ ಸ್ವರೂಪ ಸೂಚಿಯಲ್ಲಿ' 'ಯಾವುದೇ ಮತಧರ್ಮಕ್ಕೆ ಸಂಬಂಧಿಸಿದ ಮೌಢ್ಯಪ್ರೇರಕ ... ..." ಎಂಬ ಭಾಗವನ್ನು ನೋಡಿ.

ಕಾಯ್ದೆಯಿಂದ ಭಾರತೀಯ ಸಂಸ್ಕೃತಿಗೆ ಧಕ್ಕೆಯಾಗುತ್ತದೆ ಎಂಬ ವಾದವೂ ಇದೆ. ಕೆಲವು ಮೂಢನಂಬಿಕೆಯ ಆಚರಣೆಗಳನ್ನು ನಿಷೇಧಿಸುವುದರಿಂದ ಭಾರತೀಯ ಸಂಸ್ಕೃತಿಗೆ ಧಕ್ಕೆ ಹೇಗಾಗುತ್ತದೆ!! ಹಾಗಿದ್ದರೆ ಭಾರತೀಯ ಸಂಸ್ಕೃತಿ ಅಷ್ಟು ದುರ್ಬಲವೇ? ಅಷ್ಟು ಪೇಲವವೇ? ಎಂಬ ಪ್ರಶ್ನೆ ಏಳುತ್ತದೆ. ಭಾರತೀಯ ಸಂಸ್ಕೃತಿ ಅಷ್ಟು ದುರ್ಬಲ ಅಲ್ಲ. ಅದು ಸಾವಿರಾರು ವರ್ಷಗಳಿಂದ ಉಳಿದುಕೊಂಡಿದೆ.

ಸಂಪ್ರದಾಯ, ನಂಬಿಕೆ ಹೆಸರಿನಲ್ಲಿ ಒಬ್ಬ ವ್ಯಕ್ತಿ ತನಗೆ ತಾನೆ ಹಿಂಸೆ ಮಾಡಿಕೊಂಡರೂ ಅದು ತ್ಯಾಜ್ಯವೆ ಹೀಗಾಗಿ ಅದನ್ನು ಬಿಡಬೇಕಾಗುತ್ತದೆ. ಯಾವುದೇ ಧರ್ಮದಲ್ಲಿ ಇಂತಹ ಆಚರಣೆ ಇರಲಿ ಅದನ್ನು ನಿಷೇಧಿಸಬೇಕಾಗುತ್ತದೆ. ಎಲ್ಲ ಧರ್ಮಕ್ಕೂ ಇದು ಅನ್ವಯಿಸುತ್ತದೆ. ನಮ್ಮ ಧರ್ಮದ ಮೇಲೆ ಹಲ್ಲೆ ನಡೆಯುತ್ತಿದೆ. ಧಾಳಿ ನಡೆಯುತ್ತಿದೆ ಎಂದು ಜನರನ್ನು ಎತ್ತಿಕಟ್ಟಲು ಯತ್ನಿಸುವವರಿಗೆ ಜನರಲ್ಲಿ ಭೀತಿ ಉಂಟುಮಾಡಿ ರಾಜಕೀಯ ಲಾಭ ಮಾಡಿಕೊಳ್ಳುವ ದುರುದ್ದೇಶವಿರುತ್ತದೆ. ಈ ಪ್ರಚಾರ ಮತ್ತು ಪ್ರಯತ್ನದ ಹಿಂದೆ ಮೂಲಭೂತವಾದಿ ಶಕ್ತಿಗಳು ಕೆಲಸ ಮಾಡುತ್ತಿರುತ್ತವೆ.

ಪ್ರಶ್ನೆ: ಜನರ ನಂಬಿಕೆಗಳನ್ನು ಪ್ರಶ್ನಿಸಲು 'ಸಾಹಿತಿ–ಬುದ್ಧಿಜೀವಿ'ಗಳಿಗೇನು ಅಧಿಕಾರ ಇದೆ ಎಂಬ ಪ್ರಶ್ನೆ ಕೇಳಿಬರುತ್ತಿದೆ. ಅದಕ್ಕೆ ನೀವೇನು ಹೇಳುವಿರಿ. ?

ಡಾ. ಜಿ.ಆರ್: ಕರ್ನಾಟಕ ರಾಜ್ಯ ಸರ್ಕಾರ ಮೂಢನಂಬಿಕೆ ವಿರೋಧಿ ಕಾಯ್ದೆಯ ಕರಡು ರೂಪಿಸಿಕೊಡಿ ಎಂದು ರಾಷ್ಟ್ರೀಯ ಕಾನೂನು ಶಾಲೆ(ಎನ್‌ಎಲ್‌ಎಸ್‌ಐಯು)ಗೆ ಅಧಿಕೃತವಾಗಿ ಪತ್ರ ಬರೆದಿತ್ತು.

ಈ ರಾಷ್ಟ್ರೀಯ ಕಾನೂನು ಶಾಲೆ 'ಕರ್ನಾಟಕ ಮೂಢನಂಬಿಕೆ ಆಚರಣೆಗಳ ಪ್ರತಿಬಂಧಕ ವಿಧೇಯಕ, 2013'ರ ಕರಡು ರೂಪಿಸಿ ಸರ್ಕಾರಕ್ಕೆ ಸಲ್ಲಿಸಿದೆ. ಇಂತಹ ಕರಡು ರೂಪಿಸುವ ಪ್ರಕ್ರಿಯೆಯಲ್ಲಿ ಕಾನೂನು ಶಾಲೆಯವರು ತಮಗೆ ಸಂಪರ್ಕದಲ್ಲಿರುವ ಹಲವರನ್ನು ಕರೆದು ಚರ್ಚಿಸಿದ್ದಾರೆ. ಇದೇನು ಅಧಿಕೃತ ಸಮಿತಿ ಸಭೆಯಲ್ಲ. ಸಲಹೆ ಪಡೆದುಕೊಳ್ಳಲು ಕರೆದ ಅನೌಪಚಾರಿಕ ಸಭೆಯಷ್ಟೆ ಅದು. ಇಂತಹ ಕೆಲವು ಸಭೆಯಲ್ಲಿ ವಿನಂತಿಸಿದ್ದರಿಂದ ನಾನು ಸಭೆಯ ಅಧ್ಯಕ್ಷತೆ ವಹಿಸಿದ್ದೆ. ನಾನಿಲ್ಲದಾಗ ಬೇರೆಯವರೂ ಅಧ್ಯಕ್ಷತೆ ವಹಿಸಿದ್ದಾರೆ. ಅದು ಸಭೆಯ ಅಧ್ಯಕ್ಷತೆ ಅಷ್ಟೆ. ಕಾನೂನು ಶಾಲೆ ರೂಪಿಸಿ ಕೊಟ್ಟಿರುವುದು ಕರಡು ಮಸೂದೆಯಷ್ಟೆ. ಇದನ್ನೇ ಅಂಗೀಕರಿಸಿಬಿಡಬೇಕು ಅಂತ ಎಲ್ಲೂ ಹೇಳಿಲ್ಲ. ಈ ಕರಡು ಮಸೂದೆಯ ಬಗೆಗೆ ವ್ಯಾಪಕವಾದ ಚರ್ಚೆ ನಡೆಯಬೇಕು. ಸಮಾಜದ ಎಲ್ಲ ವಿಭಾಗಗಳಿಂದ ಅಭಿಪ್ರಾಯಗಳನ್ನು ಪಡೆದುಕೊಳ್ಳಬೇಕು. ಶಾಸಕಾಂಗ ಮಸೂದೆಯ ಕುರಿತು ಚರ್ಚೆಮಾಡಿ ಯಾವುದೇ ಅಂಶವನ್ನು ತಿದ್ದುಪಡಿ ಮಾಡಬಹುದು, ಯಾವುದೇ ಅಂಶವನ್ನು ಸೇರ್ಪಡೆ ಮಾಡಬಹುದು. ತೆಗೆದುಹಾಕಬಹುದು.

ಇದಲ್ಲದೇ ಕಾನೂನು ರೂಪಿಸುವುದರಿಂದಷ್ಟೆ ಮೂಢನಂಬಿಕೆಗಳ ನಿವಾರಣೆ ಆಗುವುದಿಲ್ಲ. ವ್ಯಾಪಕವಾದ ಜನಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂಬುದನ್ನು ಕರಡು ಕಾಯ್ದೆಯಲ್ಲಿಯೂ ಸಹ ಸೂಚಿಸಲಾಗಿದೆ.

****

	ಕರ್ನಾಟಕ ಮೂಢನಂಬಿಕೆ ಆಚರಣೆಗಳ ಪ್ರತಿಬಂಧಕ ವಿಧೇಯಕ – 2013 ಹಾನಿಕರ, ಶೋಷಣಾತ್ಮಕ ಹಾಗೂ ಮಾನವನ ಘನತೆಗೆ ಕುಂದುಂಟುಮಾಡುವ ಮೂಢನಂಬಿಕೆ ಆಚರಣೆಗಳನ್ನು ನಿರ್ಮೂಲನ ಮಾಡುವ ದೃಷ್ಟಿಯಿಂದ ಅವುಗಳ ನಿವಾರಣೆಗೆ; ಹಾಗೆ ನಿವಾರಣೆ ಮಾಡುವುದನ್ನು ಖಚಿತ ಪಡಿಸಿಕೊಳ್ಳುವುದಕ್ಕಾಗಿ ರಾಜ್ಯಮಟ್ಟದಲ್ಲಿ ಕರ್ನಾಟಕ ಮೂಢನಂಬಿಕೆ ವಿರೋಧಿ ಪ್ರಾಧಿಕಾರವನ್ನು ಮತ್ತು ಜಿಲ್ಲಾ ಮಟ್ಟದಲ್ಲಿ ಮೂಢನಂಬಿಕೆ ಆಚರಣೆಗಳ ಬಗೆಗಿನ ಜಾಗೃತ ಸಮಿತಿಗಳನ್ನು ಸ್ಥಾಪಿಸುವುದಕ್ಕಾಗಿ, ಮೂಢನಂಬಿಕೆ ಆಚರಣೆಗಳ ದುಷ್ಪರಿಣಾಮಗಳನ್ನು ಬಯಲಿಗೆಳೆಯುವವರಿಗೆ ರಕ್ಷಣೆ ನೀಡುವುದಕ್ಕಾಗಿ ಮತ್ತು ಅಂಥ ಪರಿಣಾಮಗಳ ಬಗ್ಗೆ ತಿಳಿವಳಿಕೆ ಮೂಡಿಸುವುದಕ್ಕಾಗಿ ಹಾಗೂ ಅದಕ್ಕೆ ಸಂಬಂಧಪಟ್ಟ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳ ಬಗ್ಗೆ ವಿಶೇಷ ಉಪಬಂಧ ಕಲ್ಪಿಸುವುದಕ್ಕಾಗಿ ಒಂದು ವಿಧೇಯಕ.
	ಅಧ್ಯಾಯ–1
ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ: ಪರಿಭಾಷೆಗಳು	1. ಈ ಅಧಿನಿಯಮವನ್ನು, ಕರ್ನಾಟಕ ಮೂಢನಂಬಿಕೆ ಆಚರಣೆಗಳ ಪ್ರತಿಬಂಧಕ ವಿಧೇಯಕ, 2013 ಎಂದು ಕರೆಯತಕ್ಕದ್ದು. (2) ಇದು ಇಡೀ ಕರ್ನಾಟಕ ರಾಜ್ಯಕ್ಕೆ ವ್ಯಾಪ್ತವಾಗುತ್ತದೆ. (3) ಈ ಅಧಿನಿಮದ (3)ನೇ ಪ್ರಕರಣವು ಈ ಕೂಡಲೇ ಜಾರಿಯಲ್ಲಿ ಬರತಕ್ಕುದು ಮತ್ತು ಈ ಅಧಿನಿಯಮದ ಉಳಿದ ಉಪಬಂಧಗಳು ರಾಜ್ಯ ಸರ್ಕಾರವು ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಯಲ್ಲಿ ಬರತಕ್ಕುದು ಮತ್ತು ಈ ಅಧಿನಿಯಮದ ಬೇರೆ ಬೇರೆ ಉಪಬಂಧಗಳಿಗೆ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು ಮತ್ತು ಅಂತಹ ಯಾವುದೇ ಉಪಬಂಧದಲ್ಲಿ ಈ ಅಧಿನಿಯಮದ ಪ್ರಾರಂಭಕ್ಕೆ ಸಂಬಂಧಿಸಿದ ಉಲ್ಲೇಖವನ್ನು ಆ ಉಪಬಂಧವು ಜಾರಿಯಲ್ಲಿ ಬರುವ ದಿನಾಂಕಕ್ಕೆ ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕದ್ದು. **2.**–(1)ಈ ಅಧಿನಿಯಮದಲ್ಲಿ ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯವಿಲ್ಲದಿದ್ದರೆ, (ಎ)**"ಪ್ರಾಧಿಕಾರ"** ಎಂದರೆ, ಅಧಿನಿಯಮದ 9ನೇ ಪ್ರಕರಣದ ಅಡಿಯಲ್ಲಿ ಸ್ಥಾಪಿಸಲಾದ 'ಕರ್ನಾಟಕ ಮೂಢನಂಬಿಕೆ ವಿರೋಧಿ ಪ್ರಾಧಿಕಾರ';

	(ಬಿ) **"ಸಮಿತಿ'** ಎಂದರೆ, ಅಧಿನಿಯಮದ 15ನೇ ಪ್ರಕರಣದ ಅಡಿಯಲ್ಲಿ ಮೂಢನಂಬಿಕೆ ಆಚರಣೆಗಳ ಬಗೆಗಿನ ಜಾಗೃತ ಸಮಿತಿ,; (ಸಿ) **"ನಿಧಿ"** ಎಂದರೆ, ಅಧಿನಿಯಮದ 8ನೇ ಪ್ರಕರಣದ ಅಡಿಯಲ್ಲಿ ರಾಜ್ಯಸರ್ಕಾರದಿಂದ ಸ್ಥಾಪಿಸಲಾದ ಮೂಢನಂಬಿಕೆ ಆಚರಣೆಗಳ ತಡೆ ನಿಧಿ; (ಡಿ)**"ವ್ಯಕ್ತಿಗಳು"** ಎಂಬುದರಲ್ಲಿ ಸಹಜ ವ್ಯಕ್ತಿಗಳು ಮತ್ತು ಕಾನೂನು ವ್ಯಕ್ತಿಗಳು ಸೇರುತ್ತಾರೆ; (ಇ) **"ನಿಯಮಿಸಲಾದುದು"** ಎಂದರೆ, ಸಂದರ್ಭವು ಸೂಚಿಸುವಂತೆ ಈ ಅಧಿನಿಯಮದ ಅಡಿಯಲ್ಲಿ ಮಾಡಲಾದ ನಿಯಮಗಳಿಂದ ನಿಯಮಿಸಲಾದುದು; (ಎಫ್) **"ಪ್ರಸಾರ"** ಎಂದರೆ, ಮೂಢನಂಬಿಕೆ ಆಚರಣೆಗಳನ್ನು ಬೆಂಬಲಿಸುವ ಯಾವುದೇ ವಿಷಯದ ಜಾಹೀರಾತು, ಪ್ರಕಟಣೆ, ಪ್ರಸಾರ ಅಥವಾ ಸಮಾಚಾರ; (ಜಿ) **"ನಿಯಮಾವಳಿಗಳು"** ಎಂದರೆ, ಸಂದರ್ಭವು ಸೂಚಿಸುವಂತೆ, ಈ ಅಧಿನಿಯಮದ ಅಡಿಯಲ್ಲಿ ಪ್ರತಿ ಜಿಲ್ಲೆಯಲ್ಲಿ ಕರ್ನಾಟಕ ಮೂಢನಂಬಿಕೆ ವಿರೋಧಿ ಪ್ರಾಧಿಕಾರದಿಂದ ರಚಿಸಲಾದ ನಿಯಮಾವಳಿಗಳು ಅಥವಾ ಮೂಢನಂಬಿಕೆ ಆಚರಣೆಗಳ ಬಗೆಗಿನ ಜಾಗೃತ ಸಮಿತಿಯಿಂದ ರಚಿಸಲಾದ ನಿಯಮಾವಳಿಗಳು; (ಎಚ್) **"ನಿಯಮಗಳು"** ಎಂದರೆ, ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ನಿಯಮಗಳು; (ಐ) **"ಅನುಸೂಚಿ"** ಎಂದರೆ, ಈ ಅಧಿನಿಯಮಕ್ಕಿರುವ ಅನುಸೂಚಿ' (ಜೆ) **"ಮೂಢನಂಬಿಕೆ ಆಚರಣೆ"** ಎಂದರೆ, ಇನ್ನೊಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳ ಕಾಯಿಲೆಯನ್ನು ಅಥವಾ ಸಂಕಟವನ್ನು ಪರಿಹರಿಸುವ ಭರವಸೆ ನೀಡಿ ಅಥವಾ ಅವರಿಗೆ ಲಾಭ ಉಂಟಾಗುತ್ತದೆಂದು ತಿಳಿಸಿ ಅಥವಾ ಪ್ರತಿಕೂಲ ಪರಿಣಾಮ ಉಂಟಾಗುತ್ತದೆಂದು ಹೆದರಿಸಿ ಅತಿಮಾನುಷ ಶಕ್ತಿಯನ್ನು ಆಹ್ವಾನಿಸುವ ಮೂಲಕ ಅವರಿಗೆ– (ಎ) ತೀವ್ರತರವಾದ ದೈಹಿಕ ಅಥವಾ ಮಾನಸಿಕ ಹಾನಿಯುಂಟು ಮಾಡುವ ಅಥವಾ (ಬಿ) ಹಣಕಾಸಿನ ಅಥವಾ ಯಾವುದೇ ಲೈಂಗಿಕ ಶೋಷಣೆಯನ್ನುಂಟುಮಾಡುವ ಅಥವಾ (ಸಿ) ಮನುಷ್ಯನ ಘನತೆಗೆ ಘಾಸಿಯುಂಟುಮಾಡುವ ಯಾವುದೇ ಕೃತ್ಯ; ಅಥವಾಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಕೃತ್ಯ.

ಬಲಿಯಾದ ವ್ಯಕ್ತಿ	ಎಂದರೆ ಮೂಢನಂಬಿಕೆ ಆಚರಣೆಯನ್ನು ಮಾಡಿದುದರಿಂದಾಗಿ ಯಾವ ವ್ಯಕ್ತಿಗೆ ತೀವ್ರತರವಾದ ದೈಹಿಕ ಅಥವಾ ಹಾನಿಯುಂಟಾಗಿದೆಯೋ, ಯಾರು ಆರ್ಥಿಕವಾಗಿ ಲೈಂಗಿಕವಾಗಿ ಶೋಷಣೆಗೆ ಒಳಗಾಗಿರುವನೋ ಅಥವಾ ಧಕ್ಕೆಯುಂಟಾಗಿದೆಯೋ ಅಂಥ ವ್ಯಕ್ತಿ; (2) ಇಲ್ಲಿ ಬಳಸಿರುವ ಆದರೆ ಪರಿಭಾಷಿಸಿಲ್ಲದಿರುವ ಪದಗಳು ಮತ್ತು ಅಭಿವ್ಯಕ್ತಿಗಳು, ಔಷಧಗಳು ಮತ್ತು ಐಂದ್ರಜಾಲಿಕ ಪರಿಹಾರಗಳು (ಆಕ್ಷೇಪಣೀಯ ಜಾಹೀರಾತುಗಳು) ಅಧಿನಿಯಮ, 1954ರಲ್ಲಿ ಮತ್ತು ದಂಡ ಪ್ರಕ್ರಿಯಾ ಸಂಹಿತೆ, 1973ರಲ್ಲಿ ಅವಕ್ಕೆ ಅನುಕ್ರಮವಾಗಿ ಕೊಟ್ಟಿರುವ ಅರ್ಥಗಳನ್ನೇ ಹೊಂದಿರತಕ್ಕದ್ದು.
ಅಧ್ಯಾಯ –2 ಮೂಢನಂಬಿಕೆ ಆಚರಣೆಗಳ ವಿರೋಧ	
ಮೂಢನಂಬಿಕೆ ಆಚರಣೆಯನ್ನು ಮಾಡುವ ಅಪರಾಧ	(1) ಮೂಢನಂಬಿಕೆ ಆಚರಣೆಯನ್ನು ಉತ್ತೇಜಿಸುವ, ಪ್ರಸಾರ ಮಾಡುವ ಅಥವಾ ನಡೆಸುವ ಯಾರೇ ವ್ಯಕ್ತಿಯು ಒಂದು ವರ್ಷಕ್ಕೆ ಕಡಿಮೆಯಲ್ಲದ ಅವಧಿಯ ಆದರೆ 5 ವರ್ಷಗಳಿಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಹತ್ತು ಸಾವಿರ ರೂಪಾಯಿಗಳಿಗೆ ಕಡಿಮೆಯಿಲ್ಲದ ಆದರೆ ಐವತ್ತು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಇವೆರಡರಿಂದಲೂ ದಂಡಿತನಾಗತಕ್ಕದ್ದು. (2)ಬಲಿಯಾದ ವ್ಯಕ್ತಿಯ ಸಮ್ಮತಿಯು ಈ ಪ್ರಕರಣದ ಅಡಿಯಲ್ಲಿ ಪ್ರತಿರಕ್ಷೆಯಾಗತಕ್ಕದ್ದಲ್ಲ. (3) ಈ ಪ್ರಕರಣದಲ್ಲಿ ಏನೇ ಇದ್ದರೂ ಮೂಢನಂಬಿಕೆ ಆಚರಣೆಯಿಂದ ಬಲಿಯಾದ ವ್ಯಕ್ತಿಯು, ಅಂಥ ಆಚರಣೆಯನ್ನು ನಡೆಸಿದುದರ ಅಥವಾ ಅದಕ್ಕೆ ದುಷ್ಪ್ರೇರಣೆ ನೀಡಿದುದರ ದೋಷಿಯಾಗತಕ್ಕದ್ದಲ್ಲ.
ಕಂಪನಿಗಳಿಂದ ಅಪರಾಧಗಳು	(1) ಈ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧವನ್ನು ಮಾಡುವ ವ್ಯಕ್ತಿಯು ಒಂದು ಕಂಪನಿಯಾಗಿದ್ದರೆ, ಅಪರಾಧವು ನಡೆದ ಕಾಲದಲ್ಲಿ ವ್ಯವಹಾರಗಳನ್ನು ನಡೆಸುವುದಕ್ಕಾಗಿ ಕಂಪನಿಯ ಆಡಳಿತವನ್ನು ಹೊಂದಿದ್ದ ಮತ್ತು ಕಂಪನಿಗೆ ಹೊಣೆಗಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಮತ್ತು ಕಂಪನಿಯನ್ನು ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ತನ್ನ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕದ್ದು ಹಾಗೂ ಅದಕ್ಕನುಸಾರವಾಗಿ ದಂಡಿತರಾಗತಕ್ಕದ್ದು; ಪರಂತು, ಈ ಉಪಪ್ರಕರಣದಲ್ಲಿ ಇರುವುದು ಯಾವುದೂ, ಅಂಥ ಅಪರಾಧವು ತನಗೆ

	ಗೊತ್ತಿಲ್ಲದಂತೆ ನಡೆಯಿತೆಂದು ಅಥವಾ ಅಂಥ ಅಪರಾಧವು ನಡೆಯುವುದನ್ನು ತಡೆಗಟ್ಟಲು ತಾನು ಎಲ್ಲ ಯುಕ್ತ ಶ್ರದ್ದೆಯನ್ನು ವಹಿಸಿದ್ದನೆಂದು ಅಂಥ ಯಾ-ರೇ ವ್ಯಕ್ತಿಯು ರುಜುವಾತುಪಡಿಸಿದರೆ, ಅವನನ್ನು ಈ ಅಧಿನಿಯಮದಲ್ಲಿ ಉಪಬಂಧಿಸಿದ ಯಾವುದೇ ದಂಡನೆಗೆ ಗುರಿಪಡಿಸತಕ್ಕದಲ್ಲ (2) (2) (1)ನೇ ಉಪ-ಪ್ರಕರಣದಲ್ಲಿ ಏನೇ ಇದ್ದರೂ, ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಒಂದು ಕಂಪನಿಯು ಮಾಡಿದ್ದಲ್ಲಿ ಮತ್ತು ಆ ಅಪರಾಧವನ್ನು, ಕಂಪನಿಯನ್ನು ನೋಡಿಕೊಳ್ಳುವುದಕ್ಕೆ ಅಥವಾ ಅದರ ಉಸ್ತುವಾರಿಗೆ ಜವಾಬ್ದಾರನಾಗಿರುವ ಕಂಪನಿಯ ನಿರ್ದೇಶಕನ, ವ್ಯವಸ್ಥಾಪಕನ, ಕಾರ್ಯದರ್ಶಿಯ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ಮಾಡಲಾಗಿದೆಯೆಂದು ಅಥವಾ ಅವನ ಯಾವುದೇ ನಿರ್ಲಕ್ಷ್ಯದಿಂದ ಸಂಭವಿಸಿತೆಂದು ರುಜುವಾತಾದಲ್ಲಿ ಅಂಥ ನಿರ್ದೇಶಕನನ್ನು, ವ್ಯವಸ್ಥಾಪಕನನ್ನು, ಕಾರ್ಯದರ್ಶಿಯನ್ನು ಅಥವಾ ಇತರ ಅಧಿಕಾರಿಯನ್ನು ಆ ಅಪರಾಧದ ದೋಷಿಯೆಂದು ಭಾವಿಸತಕ್ಕುದು ಮತ್ತು ಅವನನ್ನು ವ್ಯವಹರಣೆಗೆ ಗುರಿಪಡಿಸತಕ್ಕುದು ಮತ್ತು ತದನುಸಾರವಾಗಿ ದಂಡಿತನಾಗತಕ್ಕುದು. ವಿವರಣೆ:- ಈ ಪ್ರಕರಣದ ಉದ್ದೇಶಗಳಿಗಾಗಿ,- (ಎ) "ಕಂಪನಿ" ಎಂದರೆ, ಒಂದು ನಿಗಮಿತ ನಿಕಾಯ ಮತ್ತು ಇದು ಒಂದು ಫರ್ಮ್ ಅನ್ನು ವ್ಯಕ್ತಿಗಳ ಸಂಸ್ಥೆಯನ್ನು ಅಥವಾ ವ್ಯಕ್ತಿಗಳ ನಿಕಾಯವನ್ನು, ಅದು ನಿಗಮಿತವಾಗಿರಲಿ ಅಥವಾ ಇಲ್ಲದಿರಲಿ ಒಳಗೊಳ್ಳುತ್ತದೆ ಮತ್ತು ಇದು ಒಂದು ವಿಶ್ವಸ್ಥ ಸಂಸ್ಥೆಯನ್ನೂ ಸಹ, ಅದು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ನೋಂದಾಯಿತವಾಗಿರಲಿ ಅಥವಾ ಇಲ್ಲದಿರಲಿ, ಒಳಗೊಳ್ಳುತ್ತದೆ. (ಬಿ) "ಒಂದು ಫರ್ಮಿನ ಸಂಬಂಧದಲ್ಲಿ ನಿರ್ದೇಶಕ" ಎಂದರೆ ಫರ್ಮಿನ ಪಾಲುದಾರ ಮತ್ತು ನಿಗಮಿತ ನಿಕಾಯ, ವ್ಯಕ್ತಿಗಳ ಸಂಸ್ಥೆ, ಅಥವಾ ವ್ಯಕ್ತಿಗಳ ನಿಕಾಯದ ಸಂಬಂಧದಲ್ಲಿ, ಅವುಗಳ ವ್ಯವಹಾರಗಳ ನಿಯಂತ್ರಣವನ್ನು ವ್ಯಕ್ತಿ ಮತ್ತು ಒಂದು ವಿಶ್ವಸ್ಥ ಸಂಸ್ಥೆಯ ಸಂಬಂಧದಲ್ಲಿ, ವಿಶ್ವಸ್ಥ ಸಂಸ್ಥೆಯ ವ್ಯವಹಾರಗಳನ್ನು ನೋಡಿಕೊಳ್ಳುವ ವ್ಯಕ್ತಿಯನ್ನು ಒಳಗೊಳ್ಳುತ್ತದೆ.
ದುಷ್ಪ್ರೇರಣೆ	5. ಈ ಅಧಿನಿಯಮದ ಅಡಿಯಲ್ಲಿ ದಂಡನಾರ್ಹವಾಗುವ ಯಾವುದೇ ಅಪರಾಧಕ್ಕೆ ದುಷ್ಪ್ರೇರಣೆ ನೀಡುವ ಯಾರೇ ವ್ಯಕ್ತಿಯು ಹಾಗೆ ದುಷ್ಪೇರಣೆ ನೀಡಿದ ಅಪರಾಧವನ್ನು ಎಸಗಲಾಗಿರಲಿ ಅಥವಾ ಇಲ್ಲದಿರಲಿ ಹಾಗೆ ದುಷ್ಪ್ರೇರಣೆ ನೀಡಿದ ಅಪರಾಧಕ್ಕೆ ನೀಡಲಾಗುವ ಅದೇ ಶಿಕ್ಷೆಯಿಂದ ದಂಡಿತನಾಗತಕ್ಕದ್ದು. ವಿವರಣೆ:- ಈ ಅಧಿನಿಯಮದ ಉದ್ದೇಶಕ್ಕಾಗಿ, 'ದುಷ್ಪ್ರೇರಣೆ' ಎಂಬುದು ಭಾರತ ದಂಡ ಸಂಹಿತೆ (1860ರ 45) ರಲ್ಲಿ ಅದಕ್ಕೆ ನೀಡಲಾಗಿರುವ ಅರ್ಥವನ್ನೇ ಹೊಂದಿರತಕ್ಕದ್ದು.

ಅಪರಾಧಗಳು ಸಂಜ್ಞೇಯ ಮತ್ತು ಜಾಮೀನೀಯವಲ್ಲದವುಗಳು	6. ಅನುಸೂಚಿಯಲ್ಲಿ ನಿರ್ದಿಷ್ಟವಾಗಿ ಸೂಚಿಸಿದ್ದ ಹೊರತು ಈ ಅಧಿನಿಯಮದ ಅಡಿಯಲ್ಲಿ ದಂಡನೀಯವಾಗುವ ಎಲ್ಲ ಅಪರಾಧಗಳು ಸಂಜ್ಞೇಯವಾಗಿರತಕ್ಕದ್ದು ಮತ್ತು ಜಾಮೀನಿಯವಲ್ಲದವು ಗಳಾಗಿರತಕ್ಕದ್ದು.
ಅಪರಾಧಗಳ ವಿಚಾರಣೆ ನಡೆಸಲು ಅಧಿಕಾರ ವ್ಯಾಪ್ತಿ	7. ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ಅಥವಾ ಪ್ರಥಮ ಮ್ಯಾಜಿಸ್ಟ್ರೇಟರ ನ್ಯಾಯಾಲಯಕ್ಕಿಂತ ಕೆಳಗಿನ ಯಾವುದೇ ನ್ಯಾಯಾಲಯವು ಈ ಅಧಿನಿಯಮದ ಅಡಿಯಲ್ಲಿ ದಂಡನೀಯವಾಗುವ ಯಾವುದೇ ಅಪರಾಧದ ವಿಚಾರಣೆಯನ್ನು ನಡೆಸತಕ್ಕದ್ದಲ್ಲ.
ಮೂಢನಂಬಿಕೆ ಆಚರಣೆಗಳ ತಡೆ ವಿಧಿ	8. (1) ರಾಜ್ಯ ಸರ್ಕಾರವು,- (i)ಮೂಢನಂಬಿಕೆ ಆಚರಣೆಯಿಂದ ಬಲಿಯಾದವರಿಗೆ ಪರಿಹಾರ, ನಷ್ಟ ಪರಿಹಾರ ಮತ್ತು ಪುರ್ನವಸತಿ ಕಲ್ಪಿಸುವುದಕ್ಕಾಗಿ, (ii)ವೈಜ್ಞಾನಿಕ ಮನೋಭಾವವನ್ನು ಬೆಳೆಸಿಕೊಳ್ಳುವ ಬಗ್ಗೆ ಅರಿವು ಮತ್ತು ಶಿಕ್ಷಣ ನೀಡುವುದನ್ನು ಉತ್ತೇಜಿಸುವುದಕ್ಕಾಗಿ ಮತ್ತು ಮೂಢನಂಬಿಕೆ ಆಚರಣೆಯನ್ನು ತಡೆಯುವುದಕ್ಕಾಗಿ,- (iii)ಈ ಅಧಿನಿಯಮದ ಉಪಬಂಧಗಳಿಗೆ ಸಂಗತವಾಗಿರುವ ಇತರ ಚಟುವಟಿಕೆಗಳನ್ನು ಕೈಗೊಳ್ಳುವುದಕ್ಕಾಗಿ -ಮೂಢನಂಬಿಕೆ ಆಚರಣೆಗಳ ತಡೆ ನಿಧಿಯನ್ನು ಸ್ಥಾಪಿಸತಕ್ಕದ್ದು. (2)ಅಂತಹ ನಿಧಿಯ ಅಡಿಯಲ್ಲಿ ವಂತಿಗೆ ನೀಡಲು ಮತ್ತು ಅದರ ಹಣದ ನೀಡುವ ಬಟವಾಡೆ ಮಾಡುವ ಕಾರ್ಯವಿಧಾನ ಮತ್ತು ರೀತಿಯು ಈ ಸಂಬಂಧವಾಗಿ ನಿಯಮಿಸಬಹುದಾದ ನಿಯಮಗಳಿಗೆ ಅನುಸಾರವಾಗಿ ಇರತಕ್ಕದ್ದು. (3)ಈ ಪ್ರಕರಣದಲ್ಲಿ ಇರುವುದು ಯಾವುದು ಸಂಹಿತೆಯ 357ನೇ ಪ್ರಕರಣದ ಅಡಿಯಲ್ಲಿ ನಷ್ಟ ಪರಿಹಾರವನ್ನು ಸಂದಾಯ ಮಾಡುವ ಆದೇಶವನ್ನು ಹೊರಡಿಸುವ ನ್ಯಾಯಾಲಯದ ಅಧಿಕಾರವನ್ನು ಅಲ್ಪೀಕರಿಸತಕ್ಕದ್ದಲ್ಲ.
ಅಧ್ಯಾಯ-3 ಕರ್ನಾಟಕ ಮೂಢನಂಬಿಕೆ ವಿರೋಧಿ ಪ್ರಾಧಿಕಾರ	
ಕರ್ನಾಟಕ ಮೂಢನಂಬಿಕೆ ವಿರೋಧಿ ಪ್ರಾಧಿಕಾರ	9. ಕರ್ನಾಟಕ ಮೂಢನಂಬಿಕೆ ವಿರೋಧಿ ಪ್ರಾಧಿಕಾರ ಎಂದು - ಕರೆಯಲಾಗುವ ಒಂದು ವಿರೋಧಿ ಪ್ರಾಧಿಕಾರ ಪ್ರಾಧಿಕಾರವಿರತಕ್ಕದ್ದು.
ಅಂಗರಚನೆ	10. (1) ಆ ಪ್ರಾಧಿಕಾರದ ಅಧ್ಯಕ್ಷರನ್ನು ಮತ್ತು ಸದಸ್ಯರನ್ನು ರಾಜ್ಯಪಾಲರು ನೇಮಿಸತಕ್ಕದ್ದು. (2)ಪ್ರಾಧಿಕಾರವು - ಕರ್ನಾಟಕ ಉಚ್ಚ ನ್ಯಾಯಾಲಯದ ಉಚ್ಚ ನ್ಯಾಯಾಧೀಶರ ಶಿಫಾರಸ್ಸಿನ ಮೇರೆಗೆ ನೇಮಿಸಬಹುದಾದ ಕರ್ನಾಟಕ ಉಚ್ಚ ನಿವೃತ್ತ ನ್ಯಾಯಾಧೀಶರನ್ನು ಅಧ್ಯಕ್ಷರನ್ನಾಗಿ

	(ii) ಮೂಢನಂಬಿಕೆ ಆಚರಣೆಗಳ ಮತ್ತು ಅವುಗಳ ದುಷ್ಪರಿಣಾಮಗಳ ಬಗ್ಗೆ ವಿಶೇಷ ಜ್ಞಾನವಿರುವ ಅನುಭವವಿರುವ ಮತ್ತು ಪರಿಣತಿಯಿರುವ ಶಿಕ್ಷಣವೇತ್ತರು, ಸಾಮಾಜಿಕ ಕಾರ್ಯಕರ್ತರು ಅಥವಾ ಕಾನೂನು ತಜ್ಞರು ಆಗಿರುವ ಇಬ್ಬರು ಗಣ್ಯ ವ್ಯಕ್ತಿಗಳನ್ನು, ಹೊಂದಿರತಕ್ಕದ್ದು; ಸಮಾಜ ಕಲ್ಯಾಣ ಇಲಾಖೆಯ ಕಾರ್ಯದರ್ಶಿಯವರು ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯಾಗಿರತಕ್ಕದ್ದು.
ಅಧಿಕಾರಾವಧಿ ಮತ್ತು ಸೇವಾ ಷರತ್ತುಗಳು	11. (1) ಪ್ರಾಧಿಕಾರದ ಅಧ್ಯಕ್ಷರಾಗಿ ನೇಮಿತನಾದ ವ್ಯಕ್ತಿಯು, ಅಂತಹ ದಿನಾಂಕದಿಂದ ಮೂರು ವರ್ಷಗಳ ಅವಧಿಗೆ ಪದಧಾರಣೆ ಮಾಡಿರತಕ್ಕದ್ದು. (2) ಅಧ್ಯಕ್ಷರು ಮತ್ತು ಸದಸ್ಯರ ವೇತನ ಭತ್ಯೆಗಳು ಮತ್ತು ಸೇವಾ ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು (3)ಅಧ್ಯಕ್ಷರು ಮತ್ತು ಸದಸ್ಯರು ರಾಜ್ಯಪಾಲರಿಗೆ ಸಂಬೋಧಿಸಿ ಸ್ವ ಹಸ್ತಾಕ್ಷರದಲ್ಲಿ ಬರೆದ ಪತ್ರದ ಮೂಲಕ ತಮ್ಮ ಹುದ್ದೆಗೆ ರಾಜೀನಾಮೆ ನೀಡಬಹುದು
ಅಧಿಕಾರಗಳು ಮತ್ತು ಕರ್ತವ್ಯಗಳು	12. ಈ ಮುಂದಿನವುಗಳು ಪ್ರಾಧಿಕಾರದ ಕರ್ತವ್ಯಗಳಾಗಿರತಕ್ಕದ್ದು.- (i) ಈ ಅಧಿನಿಯಮದ ಉಪಬಂಧಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು; (ii) ಈ ಅಧಿನಿಯಮದ ಅಡಿಯಲ್ಲಿ ಸ್ಥಾಪನೆಯಾದ ಜಿಲ್ಲಾ ಜಾಗೃತ ಸಮಿತಿಗಳು ಸಲ್ಲಿಸಿದ ವರದಿಗಳನ್ನು ಸೂಕ್ಷ್ಮವಾಗಿ ಪರಿಶೀಲಿಸುವುದು; (iii) ಈ ಅಧಿನಿಯಮದ (8)ನೇ ಪ್ರಕರಣದ ಮೂಲಕ ಸ್ಥಾಪಿಸಲಾದ ಮೂಢನಂಬಿಕೆ ಆಚರಣೆಗಳ ತಡೆ ನಿಧಿಯ ಆಡಳಿತವನ್ನು ನೋಡಿಕೊಳ್ಳುವುದು; (iv) ರಾಜ್ಯ ಸಂಸ್ಥೆಗಳು ಮತ್ತು ಸಚಿವರು, ಅಧಿಕಾರಿಗಳು ಮತ್ತು ನೌಕರರು ತಮ್ಮ ಪದೀಯ ಸಾಮರ್ಥ್ಯಗಳಲ್ಲಿ ಅನುಸರಿಸುವ ಮೂಢನಂಬಿಕೆ ಆಚರಣೆಗಳನ್ನು ತಡೆಯಲು ಮತ್ತು ನಿರ್ಮೂಲನೆಗೊಳಿಸಲು ಸೂಕ್ತವಾದ ಕ್ರಮಗಳನ್ನು ಶಿಫಾರಸ್ಸು ಮಾಡುವುದು; (v) ವೈಜ್ಞಾನಿಕ ಮನೋಭಾವವನ್ನು ಬೆಳೆಸಲು ಸಹಾಯಕವಾಗುವ ರೀತಿಯಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಪಠ್ಯಕ್ರಮವನ್ನು ಪರಿಶೀಲಿಸುವುದು ಮತ್ತು ಪರಿಶೋಧಿಸುವುದು ಮತ್ತು ಅವುಗಳನ್ನು ಸೂಕ್ತವಾದ ರೀತಿಯಲ್ಲಿ ಸರಿಪಡಿಸಲು ಶಿಫಾರಸ್ಸುಗಳನ್ನು ಮಾಡುವುದು; (vi) ಮೂಢನಂಬಿಕೆ ಆಚರಣೆಗಳ ಪರಿಣಾಮಗಳ ಬಗ್ಗೆ ಸಂಶೋಧನೆ ಮತ್ತು ಅಧ್ಯಯನ ಕೈಗೊಳ್ಳಲು ಅನುಕೂಲ ಕಲ್ಪಿಸುವುದು;

	(vii) 16ನೇ ಪ್ರಕರಣದಲ್ಲಿ ಜಿಲ್ಲಾ ಜಾಗೃತ ಸಮಿತಿಗಳಿಗೆ ವಹಿಸಲಾದ ಎಲ್ಲ ಇತರ ಪ್ರಕಾರ್ಯಗಳನ್ನೂ ನೆರವೇರಿಸುವುದು; (viii) ಈ ಅಧಿನಿಯಮದ ಉದ್ದೇಶಗಳಿಗೆ ಸಂಗತವಾಗಿರುವಂತೆ ಮೂಢನಂಬಿಕೆ ಆಚರಣೆಗಳನ್ನು ನಿರ್ಮೂಲನ ಮಾಡುವ ಅಂತಹ ಇತರ ಪ್ರಕಾರ್ಯಗಳನ್ನು ಕೈಗೊಳ್ಳುವುದು. (2) ಈ ಅಧಿನಿಯಮದ ಅಡಿಯಲ್ಲಿ ಪ್ರಾಧಿಕಾರಕ್ಕೆ ಪ್ರದಾನ ಮಾಡಿರುವ ಪ್ರಕಾರ್ಯಗಳನ್ನು ಚಲಾಯಿಸುವಲ್ಲಿ ಮಾತ್ರ, ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5) ಅಡಿಯಲ್ಲಿ ದಾವೆಯನ್ನು ವಿಚಾರಣೆ ಮಾಡುವಾಗ ಸಿವಿಲ್ ನ್ಯಾಯಾಲಯವು ಹೊಂದಿರುವ ಅಧಿಕಾರಗಳನ್ನು, ಪ್ರಾಧಿಕಾರವು, ಈ ಮುಂದಿನ ವಿಷಯಗಳಿಗೆ ಸಂಬಂಧಪಟ್ಟಂತೆ ಹೊಂದಿರತಕ್ಕದ್ದು, ಎಂದರೆ.- (i) ಯಾರೇ ವ್ಯಕ್ತಿಯನ್ನು ಸಮನು ಮಾಡುವ ಮತ್ತು ಹಾಜರಾತಿಯನ್ನು ಒತ್ತಾಯಿಸುವ ಮತ್ತು ಅವನನ್ನು ಪ್ರಮಾಣವಚನದ ಮೇಲೆ ಪರೀಕ್ಷೆಗೆ ಒಳಪಡಿಸುವುದು; (ii) ಯಾವುದೇ ದಸ್ತಾವೇಜನ್ನು ಪತ್ತೆ ಮಾಡುವಂತೆ ಮತ್ತು ಹಾಜರುಪಡಿಸುವಂತೆ ಅಗತ್ಯಪಡಿಸುವುದು; (iii) ಅಫಿಡವಿಟ್ಟುಗಳ ಮೂಲಕ ಸಂಗತಿಗಳನ್ನು ರುಜುವಾತುಪಡಿಸುವುದು ಮತ್ತು (iv)ಸಂಗತಿಗಳ ಮತ್ತು ದಸ್ತಾವೇಜುಗಳ ಪರೀಕ್ಷೆಗೆ ಕಮೀಷನ್ನುಗಳನ್ನು ಹೊರಡಿಸುವುದು; (v) ನಿಯಮಿಸಬಹುದಾದಂತಹ ಇತರ ಯಾವುದೇ ವಿಷಯ.
ಅಧಿಕಾರಿಗಳು ಮತ್ತು ಉದ್ಯೋಗಿಗಳು	13.(1) ರಾಜ್ಯ ಸರ್ಕಾರವು ಈ ಅಧಿನಿಯಮದ ಅಡಿಯಲ್ಲಿ ಪ್ರಾಧಿಕಾರವು ತನ್ನ ಪ್ರಕಾರ್ಯಗಳನ್ನು ನಿರ್ವಹಿಸಲು ಅಗತ್ಯ ಎಂದು ಪರಿಗಣಿಸುವ ಅಂತಹ ಸಂಖ್ಯೆಯ ಅಧಿಕಾರಿಗಳನ್ನು ಮತ್ತು ಇತರ ಉದ್ಯೋಗಿಗಳನ್ನು ನೇಮಕ ಮಾಡಬಹುದು. (2)(1)ನೇ ಉಪಪ್ರಕರಣದ ಅಡಿಯಲ್ಲಿ ನೇಮಕ ಮಾಡಲಾದ ಪ್ರಾಧಿಕಾರದ ಅಧಿಕಾರಿಗಳು ಮತ್ತು ಇತರ ಉದ್ಯೋಗಿಗಳ ಅಧಿಕಾರಾವಧಿ ಮತ್ತು ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.
ಸಭೆಗಳು ಮತ್ತು ಕಾರ್ಯವಿಧಾನ	14.(1) ಪ್ರಾಧಿಕಾರವು, ಅಧ್ಯಕ್ಷರು ನಿರ್ವಹಿಸಬಹುದಾದಂತಹ ಸಮಯದದಲ್ಲಿ ಮತ್ತು ಅಂತಹ ಸ್ಥಳದಲ್ಲಿ ಸಭೆ ಸೇರತಕ್ಕದ್ದು. (2)ಪ್ರಾಧಿಕಾರವು ಈ ಅಧಿನಿಯಮದ ಅಡಿಯಲ್ಲಿ ತನ್ನ ಪ್ರಕಾರ್ಯಗಳನ್ನು ನೆರವೇರಿಸಲು ಕಾರ್ಯವಿಧಾನವನ್ನು ನಿಯಾಮಾವಳಿಗಳ ಮೂಲಕ ನಿರ್ದಿಷ್ಟಪಡಿಸುವ ಅಧಿಕಾರವನ್ನು ಹೊಂದಿರತಕ್ಕದ್ದು.

ಅಧ್ಯಾಯ- 4. ಮೂಢನಂಬಿಕೆ ಆಚರಣೆಗಳ ಬಗೆಗೆ ಜಾಗೃತ ಸಮಿತಿ	
ಜಾಗೃತ ಸಮಿತಿಗಳು	15. ಪ್ರತಿ ಜಿಲ್ಲೆಯಲ್ಲಿಯೂ, ರಾಜ್ಯ ಸರ್ಕಾರದಿಂದ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಮೂರು ವರ್ಷಗಳ ಅವಧಿಗೆ ರಚಿಸಲಾಗುವ ಮೂಢನಂಬಿಕೆ ಆಚರಣೆಗಳ ಬಗೆಗಿನ ಒಂದು ಜಾಗೃತ ಸಮಿತಿ ಇರತಕ್ಕದ್ದು.
ಅಂಗರಚನೆ:	16. ಪ್ರತಿ ಸಮಿತಿಯುಈ ಮುಂದಿನವರನ್ನು ಒಳಗೊಂಡಿರತಕ್ಕದ್ದು. (1)ಜಿಲ್ಲಾ ಮ್ಯಾಜಿಸ್ಟ್ರೇಟರು ಅಥವಾ ಅವರಿಂದ ನಾಮನಿರ್ದೇಶಿತನಾದ ಯಾರೇ ಇತರ ವ್ಯಕ್ತಿ, ಅಧ್ಯಕ್ಷರು:ಪರಂತು ಜಿಲ್ಲಾ ಮ್ಯಾಜಿಸ್ಟ್ರೇಟರಿಂದ ನಾಮನಿರ್ದೇಶಿತನಾದ ಯಾರೇ ವ್ಯಕ್ತಿಯು ಸಂಹಿತೆಯ ಅಡಿಯಲ್ಲಿ ಕಾರ್ಯಕಾರಿ ಮ್ಯಾಜಿಸ್ಟ್ರೇಟರ ಅಧಿಕಾರ ಹೊಂದಿರುವ ವ್ಯಕ್ತಿಯಾಗಿರತಕ್ಕದ್ದು. (2)ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ ಮತ್ತು ಸಿವಿಲ್ ಹಕ್ಕುಗಳ ಜಾರಿ ನಿರ್ದೇಶನಾಲಯದ ಜಿಲ್ಲಾ ಮಟ್ಟದ ಒಬ್ಬರು ಅಧಿಕಾರಿಯನ್ನು ಒಳಗೊಂಡಂತೆ ಜಿಲ್ಲಾ ಮ್ಯಾಜಿಸ್ಟ್ರೇಟರು ನಾಮನಿರ್ದೇಶಿಸುವ ಜಿಲ್ಲೆಯಲ್ಲಿ ವಾಸಿಸುವ ಮೂವರು ವ್ಯಕ್ತಿಗಳು, ಸದಸ್ಯರು,- (3)ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರಾಗುವ ನಾಗರಿಕ ಸಮಾಜದ ಐವರು ಸದಸ್ಯರು, ಅವರು ಮೂಢನಂಬಿಕೆ ಆಚರಣೆಗಳ ಮತ್ತು ಅವುಗಳ ದುಷ್ಪರಿಣಾಮಗಳ ಬಗ್ಗೆ ವಿಶೇಷ ಜ್ಞಾನವಿರುವ, ಅನುಭವವಿರುವ ಮತ್ತು ಪರಿಣತಿಯಿರುವ ಶಿಕ್ಷಣವೇತ್ತರು, ಸಾಮಾಜಿಕ ಕಾರ್ಯಕರ್ತರು ಅಥವಾ ಕಾನೂನು ತಜ್ಞರು ಆಗಿರತಕ್ಕದ್ದು: ಪರಂತು, ಈ ಉಪ ಪ್ರಕರಣದ ಅಡಿಯಲ್ಲಿ ನಾಮನಿರ್ದೇಶಿತರಾಗುವ ಕನಿಷ್ಠ ಇಬ್ಬರು ಸದಸ್ಯರು ಮಹಿಳೆಯರಾಗಿರತಕ್ಕದ್ದು; ಮತ್ತೂ ಪರಂತು, ಈ ಉಪ ಪ್ರಕರಣದ ಅಡಿಯಲ್ಲಿ ನಾಮನಿರ್ದೇಶಿತರಾದ ಕನಿಷ್ಠ ಮೂವರು ಸರ್ಕಾರೇತರ ಸದಸ್ಯರು ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಗಳಾಗಿರತಕ್ಕದ್ದು.
ಪ್ರಕಾರ್ಯಗಳು	17. ಈ ಮುಂದಿನವುಗಳು ಪ್ರತಿ ಸಮಿತಿಯ ಕರ್ತವ್ಯಗಳಾಗಿರತಕ್ಕದ್ದು; (1) ಮೂಢನಂಬಿಕೆ ಆಚರಣೆಗಳನ್ನು ಗುರುತಿಸಲು ಜಿಲ್ಲಾದ್ಯಂತ ಸಮೀಕ್ಷೆಗಳನ್ನು ಕೈಗೊಳ್ಳುವುದು ಮತ್ತು ಅವುಗಳನ್ನು ಅನುಸೂಚಿಯಲ್ಲಿ ಸೇರಿಸಲು ರಾಜ್ಯ ಸರ್ಕಾರಕ್ಕೆ ಸೂಕ್ತವಾದ ಶಿಫಾರಸ್ಸುಗಳನ್ನು ಮಾಡುವುದು; (2) ಮೂಢನಂಬಿಕೆ ಆಚರಣೆಗಳ ದುಷ್ಪರಿಣಾಮಗಳ ಬಗ್ಗೆ ಜಿಲ್ಲೆಯಲ್ಲಿನ ಜನತೆಗೆ ಅದರಲ್ಲೂ ವಿಶೇಷವಾಗಿ ಅದಕ್ಕೆ ಸುಲಭವಾಗಿ ಬಲಿಯಾಗುವ ಸಮಾಜದ ದುರ್ಬಲ ವರ್ಗಗಳಿಗೆ ತಿಳಿವಳಿಕೆ ಕಾರ್ಯಕ್ರಮಗಳನ್ನು ಮತ್ತು ಆಂದೋಲನಗಳನ್ನು ನಡೆಸುವುದು;

	ಯಾರೇ ವ್ಯಕ್ತಿಯು ಅಥವಾ ಸಂಸ್ಥೆಯು ಈ ಅಧಿನಿಯಮವನ್ನು ಉಲ್ಲಂಘಿಸಿರುವ ಬಗ್ಗೆ ಯಾರೇ ವ್ಯಕ್ತಿಯಿಂದ ವೈಯಕ್ತಿಕ ದೂರುಗಳನ್ನು ಸ್ವೀಕರಿಸುವುದು ಅಥವಾ ತಾನೇ ಸ್ವತಃ ಅದರ ಸಂಜ್ಞಾನವನ್ನು ತೆಗೆದುಕೊಳ್ಳುವುದು ಮತ್ತು ಅಗತ್ಯ ಕ್ರಮಕ್ಕಾಗಿ ಅಧಿಕಾರ ವ್ಯಾಪ್ತಿಯಿರುವ ಪೊಲೀಸಿಗೆ ಅದನ್ನು ವರದಿ ಮಾಡುವುದು. ವಿವರಣೆ:- ಈ ಉಪಬಂಧವು, ಅಂತಹ ದೂರುಗಳನ್ನು ನೇರವಾಗಿ ತೆಗೆದುಕೊಳ್ಳುವ ಪೊಲೀಸರ ಸಾಮಾನ್ಯ ಅಧಿಕಾರಗಳು ಮತ್ತು ಅಧಿಕಾರ ವ್ಯಾಪ್ತಿಗೆ ಪ್ರತಿಕೂಲವಾಗಿರುವುದಿಲ್ಲ. (4) ಮೂಢನಂಬಿಕೆ ಆಚರಣೆಗಳನ್ನು ಬಂಯಲಿಗೆಳೆಯುವ ಮತ್ತು ಅದರ ವಿರುದ್ಧ ಹೋರಾಡುವ ವ್ಯಕ್ತಿಗಳಿಂದ ಮತ್ತು ಸಂಸ್ಥೆಗಳಿಂದ ಬರುವ ದೂರುಗಳನ್ನು ಸ್ವೀಕರಿಸುವುದು ಮತ್ತು ಅದರ ವಿಚಾರಣೆ ನಡೆಸುವುದು ಹಾಗೂ ಕಾನೂನಿನ ಅಡಿಯಲ್ಲಿ ಅವರಿಗೆ ಸೂಕ್ತ ರಕ್ಷಣೆ ನೀಡುವುದು ಮತ್ತು ಈ ಉದ್ದೇಶಕ್ಕಾಗಿ ಕಾನೂನು ಜಾರಿಗೊಳಿಸುವ ಸಂಸ್ಥೆಗಳಿಗೆ ನಿರ್ದೇಶನಗಳನ್ನು ಕೊಡುವುದು ಸೇರಿದಂತೆ ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು. (5) ಈ ಅಧಿನಿಯಮದ ಅಡಿಯಲ್ಲಿನ ಕರ್ತವ್ಯಗಳನ್ನು ಉದ್ದೇಶಪೂರ್ವಕವಾಗಿ ನಿರ್ಲಕ್ಷಿಸುವ ಸರ್ಕಾರಿ ನೌಕರರ ವಿರುದ್ಧದ ಆರೋಪಗಳ ಬಗ್ಗೆ ವಿಚಾರಣೆ ನಡೆಸುವುದು. (6) ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸಲು, ವಿಶೇಷವಾಗಿ ಈ ಅಧಿನಿಯಮದ ಉಪಬಂಧಗಳ ಉಲ್ಲಂಘನೆಯನ್ನು ತಡೆಗಟ್ಟಲು ಯಾರೇ ವ್ಯಕ್ತಿಗಳಿಗೆ, ಪ್ರಾಧಿಕಾರಗಳಿಗೆ ಅಥವಾ ಏಜೆನ್ಸಿಗಳಿಗೆ ಸೂಕ್ತವಾದ ನಿರ್ದೇಶನಗಳನ್ನು ನೀಡುವುದು. (7) ಮೂಢನಂಬಿಕೆ ಆಚರಣೆಗಳಿಗೆ ಬಲಿಯಾದವರಿಗೆ ಸಮಗ್ರ ಸಮಾಜೋ-ಆರ್ಥಿಕ ಪುನರ್ವಸತಿ ಕ್ರಮಗಳನ್ನು ಕೈಗೊಳ್ಳುವುದು.
ಅಧಿಕಾರಗಳು ಮತ್ತು ಕರ್ತವ್ಯ ವ್ಯಾಪ್ತಿ	18. (1)ಈಅಧಿನಿಯಮದ ಅಡಿಯಲ್ಲಿ ಮಾಡಿರುವ ಪ್ರಕಾರ್ಯಗಳನ್ನು ಚಲಾಯಿಸುವಲ್ಲಿ ಮಾತ್ರ, ಸಮಿತಿಯು, ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5) ಅಡಿಯಲ್ಲಿ ದಾವೆಯನ್ನು ವಿಚಾರಣೆ ಮಾಡುವಾಗ ಸಿವಿಲ್ ನ್ಯಾಯಾಲಯವು ಹೊಂದಿರುವ ಅಧಿಕಾರಗಳನ್ನು ಈ ಮುಂದಿನ ವಿಷಯಗಳಿಗೆ ಹೊಂದಿರತಕ್ಕದ್ದು, ಎಂದರೆ.- (ಎ) ಯಾರೇ ವ್ಯಕ್ತಿಯನ್ನು ಸಮನು ಮಾಡುವ ಮತ್ತು ಹಾಜರಾತಿಯನ್ನು ಒತ್ತಾಯಗೊಳಿಸುವ ಮತ್ತು ಅವನನ್ನು ಪ್ರಮಾಣವಚನದ ಮೇಲೆ ಪರೀಕ್ಷೆಗೆ ಒಳಪಡಿಸುವುದು; (ಬಿ) ಯಾವುದೇ ದಸ್ತಾವೇಜನ್ನು ಪತ್ತೆ ಮಾಡುವಂತೆ ಮತ್ತು ಹಾಜರುಪಡಿಸುವಂತೆ ಅಗತ್ಯಪಡಿಸುವುದು;

	(ಸಿ)ಅಫಿಡವಿಟ್ಟುಗಳ ಮೂಲಕ ಸಂಗತಿಗಳನ್ನು ರುಜುವಾತುಪಡಿಸುವುದು ಮತ್ತು (ಡಿ)ಸಂಗತಿಗಳ ಮತ್ತು ದಸ್ತಾವೇಜುಗಳ ಪರೀಕ್ಷೆಗೆ ಕಮೀಷನ್ನುಗಳನ್ನು ಹೊರಡಿಸುವುದು; (ಇ)ನಿಯಮಿಸಬಹುದಾದಂತಹ ಇತರ ಯಾವುದೇ ವಿಷಯ. (2)ಸಮಿತಿಯ ಅಧಿಕಾರ ವ್ಯಾಪ್ತಿಯು ಇಡೀ ಕಂದಾಯ ಜಿಲ್ಲೆಗೆ ವ್ಯಾಪ್ತವಾಗುತ್ತದೆ.
ಸಭೆಗಳು ಮತ್ತು ಕಾರ್ಯವಿಧಾನ	19. (1) ಪ್ರತಿ ಸಮಿತಿಯ ಸದಸ್ಯರ ಬಹುಮತದ ನಿರ್ಧಾರವನ್ನು ಸಮಿತಿಯ ನಿರ್ಧಾರವೆಂದು ಪರಿಗಣಿಸತಕ್ಕದ್ದು (2)ಪ್ರತಿ ಸಮಿತಿಯು ನಿರ್ದಿಷ್ಟವಾದ ಮತ್ತು ತುರ್ತು ಕ್ರಮದ ಉದ್ದೇಶಗಳಿಗಾಗಿ ಉಪ ಸಮಿತಿಗಳನ್ನು ರಚಿಸಬಹುದು. ಇದನ್ನು ಸಮಿತಿಯು ತದನಂತರದಲ್ಲಿ ಅನುಸಮರ್ಥಿಸತಕ್ಕದ್ದು. (3) ಪ್ರತಿ ಸಮಿತಿಯ ಮತ್ತು ಉಪ ಸಮಿತಿಯ (ಗಳ) ಸಭೆಗೆ ಗಣ ಪೂರ್ತಿಯು ನಿಯಮಿಸಬಹುದಾದಂತೆ ಇರತಕ್ಕದ್ದು. (4) ಪ್ರತಿ ಸಮಿತಿಯು ಅಧ್ಯಕ್ಷರು ನಿರ್ಧರಿಸಬಹುದಾದಂತಹ ಸಮಯದಲ್ಲಿ ಮತ್ತು ಅಂತಹ ಸ್ಥಳದಲ್ಲಿ ಸಭೆ ಸೇರತಕ್ಕದ್ದು. ಪರಂತು, ಅಂಥ ಸಭೆಯು ಕನಿಷ್ಠ ಮೂರು ತಿಂಗಳಿಗೊಮ್ಮೆ ಸೇರತಕ್ಕದ್ದು. (5)ಅಧ್ಯಕ್ಷರು ಮತ್ತು ಸದಸ್ಯರಿಗೆ ಸಂದಾಯ ಮಾಡುವ ಶುಲ್ಕ ಮತ್ತು ಭತ್ಯೆಗಳು ನಿಯಮಿಸಬಹುದಾದಂತೆ ಇರತಕ್ಕದ್ದು. (6) ಪ್ರತಿ ಸಮಿತಿಯು, ಅಧಿನಿಯಮದ ಅಡಿಯಲ್ಲಿ ತನ್ನ ಪ್ರಕಾರ್ಯಗಳನ್ನು ನೆರವೇರಿಸಲು ಕಾರ್ಯವಿಧಾನವನ್ನು ನಿಯಮಾವಳಿಗಳ ಮೂಲಕ ನಿರ್ದಿಷ್ಟಪಡಿಸುವ ಅಧಿಕಾರವನ್ನು ಹೊಂದಿರತಕ್ಕದ್ದು. (7)ಸಮಿತಿಯ ಯಾವುದೇ ಕೃತ್ಯ ಅಥವಾ ನಡಾವಳಿಗಳನ್ನು, ಯಾವುದೇ ಖಾಲಿ ಸ್ಥಾನ ಇದೆ ಎಂಬ ಅಥವಾ ಸಮಿತಿಯ ರಚನೆಯಲ್ಲಿ ದೋಷವಿದೆಯೆಂಬ ಕಾರಣ ಮಾತ್ರದಿಂದಲೇ ಪ್ರಶ್ನೆಗೆ ಒಳಪಡಿಸತಕ್ಕದ್ದಲ್ಲ ಅಥವಾ ಅಸಿಂಧುಗೊಳಿಸತಕ್ಕದ್ದಲ್ಲ.
ಅಧ್ಯಾಯ – 5 ಸಂಕೀರ್ಣ	
ಇತರ ಕಾನೂನುಗಳ ಅನ್ವಯ	20. ಈ ಅಧಿನಿಯಮದ ಉಪಬಂಧಗಳು, ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಹೆಚ್ಚುವರಿಯಾಗಿರತಕ್ಕದ್ದು ಮತ್ತು ಅದನ್ನು ಅಲ್ಪೀಕರಿಸತಕ್ಕದ್ದಲ್ಲ.
ನಿಯಮಗಳ ರಚನಾಧಿಕಾರ	21. (1)ರಾಜ್ಯ ಸರ್ಕಾರವು, ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವ ಉದ್ದೇಶಕ್ಕಾಗಿ ನಿಯಮಗಳನ್ನು ರಚಿಸಬಹುದು.

	(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಉಪಬಂಧ ಸಾಮಾನ್ಯತೆಗೆ ಪ್ರತಿಕೂಲವಾಗದಂತೆ ಅಂತಹ ನಿಯಮಗಳು ಈ ಮುಂದಿನ ವಿಷಯಗಳಿಗೆ ಉಪಬಂಧ ಕಲ್ಪಿಸಬಹುದು. (ಎ) 8(2) ಪ್ರಕರಣದ ಪ್ರಕಾರ ನಿಧಿಗೆ ವಂತಿಗೆ ಮತ್ತು ಅದರ ಹಣದ ಬಟವಾಡೆ (ಬಿ) 11(2)ನೇ ಪ್ರಕರಣದ ಅಡಿಯಲ್ಲಿ ಪ್ರಾಧಿಕಾರದ ಅಧ್ಯಕ್ಷರು ಮತ್ತು ಸದಸ್ಯರ ಮತ್ತು ಸಮಿತಿಯ ಸಂಬಳ, ಶುಲ್ಕಗಳು, ಭತ್ಯೆಗಳು ಮತ್ತು ಸೇವಾ ಷರತ್ತುಗಳು; (ಸಿ) 13(2)ನೇ ಪ್ರಕರಣದ ಅಡಿಯಲ್ಲಿನ ಪ್ರಾಧಿಕಾರದ ಪದಾಧಿಕಾರಿಗಳು ಮತ್ತು ಇತರ ಉದ್ಯೋಗಿಗಳ ಅಧಿಕಾರಾವಧಿ ಮತ್ತು ಷರತ್ತುಗಳು; (ಡಿ) 19(3) ನೇ ಪ್ರಕರಣದ ಅಡಿಯಲ್ಲಿ ಸಮಿತಿಗಳ ಸಭೆಗಳ ಗಣ ಪೂರ್ತಿ; (ಇ) 19(5)ನೇ ಪ್ರಕರಣದ ಅಡಿಯಲ್ಲಿ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರಿಗೆ ಸಂದಾಯ ಮಾಡಬೇಕಾದ ಶುಲ್ಕಗಳು ಮತ್ತು ಭತ್ಯೆಗಳು. (3) ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗಿನ ಅಧಿವೇಶನದಲ್ಲಿ ಇಡತಕ್ಕದ್ದು, ಮತ್ತು ಮೇಲೆ ಹೇಳಿದ ಅಧಿವೇಶನದ ಅಥವಾ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ, ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಆ ಮಾರ್ಪಾಟನ್ನು ಅಥವಾ ರದ್ದಿಯಾತಿಯನ್ನು ಅಧಿಸೂಚಿಸಿದ ದಿನಾಂಕದಿಂದ ಅಂಥ ನಿಯಮವು ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ, ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಅಡಿಯಲ್ಲಿ ಹಿಂದೆ ಮಾಡಲಾದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.
ನಿಯಮಾವಳಿಗಳನ್ನು ರಚಿಸುವ ವಿಧಾನ	22. ಪ್ರಾಧಿಕಾರ ಮತ್ತು ಸಮಿತಿಯು, ಈ ಅಧಿನಿಯಮದ ಉಪಬಂಧಗಳನ್ನು ಮತ್ತು ರಾಜ್ಯ ಸರ್ಕಾರವು ಇದರ ಉಂಸುವ ಅಡಿಯಲ್ಲಿ ರಚಿಸಿದ ನಿಯಮಗಳನ್ನು ಜಾರಿಗೊಳಿಸುವ ಉದ್ದೇಶಕ್ಕಾಗಿ ನಿಯಮಾವಳಿಗಳನ್ನು ಹೊರಡಿಸಬಹುದು.

ತೊಂದರೆಗಳನ್ನು ನಿವಾರಿಸಲು ಅಧಿಕಾರ	23. (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಾಗ ಯಾವುದೇ ತೊಂದರೆ ಉಂಟಾದರೆ, ರಾಜ್ಯ ಸರ್ಕಾರವು, ರಾಜ್ಯಪತ್ರದಲ್ಲಿ ಪ್ರಕಟಿಸುವ ಆದೇಶದ ಮೂಲಕ,ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಲ್ಲದ ಮತ್ತು ತೊಂದರೆಯನ್ನು ನಿವಾರಿಸಲು ಅಗತ್ಯವೆಂದು ಕಂಡುಬರುವ ಅಂತಹ ಉಪಬಂಧಗಳನ್ನು ಮಾಡಬಹುದು. ಪರಂತು, ಈ ಅಧಿನಿಯಮದ ಪ್ರಾರಂಭದಿಂದ 2 ವರ್ಷಗಳ ಅವಧಿಯ ಮುಕ್ತಾಯದ ನಂತರ ಈ ಪ್ರಕರಣದ ಮೇರೆಗೆ ಯಾವುದೇ ಅಂತಹ ಆದೇಶವನ್ನು ಮಾಡತಕ್ಕದ್ದಲ್ಲ. (2) ಈ ಪ್ರಕರಣದ ಅಡಿಯಲ್ಲಿ ಮಾಡಲಾದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ತರುವಾಯ ಕೂಡಲೇ ರಾಜ್ಯ ವಿಧಾನಮಂಡಲದ ಪ್ರತಿ ಸದನದ ಮುಂದೆ ಮಂಡಿಸತಕ್ಕದ್ದು.
ಉಳಿಸುವಿಕೆಗಳು	24. ಈ ಅಧಿನಿಯಮದಲ್ಲಿ ಉಪಬಂಧ ಕಲ್ಪಿಸಲಾಗಿರುವ ವಿಷಯಗಳಿಗೆ ಸಂಬಂಧಪಟ್ಟಂತೆ ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಜಾರಿಯಲ್ಲಿರುವ ನಿಯಮಗಳು, ನಿಯಮಾವಳಿಗಳು,ಆದೇಶಗಳು, ಅಧಿಸೂಚನೆಗಳು ಮತ್ತು ಸುತ್ತೋಲೆಗಳು ಈ ಅಧಿನಿಯಮದ ಉಪಬಂಧಗಳಿಗೆ ಅವುಗಳು ಸಂಗತವಾಗಿರುವಷ್ಟರ ಮಟ್ಟಿಗೆ, ಅವುಗಳನ್ನು ಈ ಅಧಿನಿಯಮದ ಮೇರೆಗೆ ಕೈಗೊಳ್ಳಲಾದ ಯಾವುದೇ ಕ್ರಮ ಅಥವ ಮಾಡಲಾದ ಯಾವುದೇ ನಿಯಮ,ನಿಯಮಾವಳಿ, ಅಧಿಸೂಚನೆ ಅಥವಾ ಆದೇಶವು ರದ್ದುಗೊಳಿಸದಿದ್ದರೆ, ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು.

ಅನುಸೂಚಿ (ಪ್ರಕರಣ 3):

(1) ಈ ಮುಂದಿನ ಅಪರಾಧಗಳು ಸಂಜ್ಞೇಯ ಅಪರಾಧಗಳಾಗಿರತಕ್ಕದ್ದು:

(ಎ) (i) ಲಾಭಕ್ಕಾಗಿ ಅಥವಾ ದೈವವನ್ನು ಸಂಪ್ರೀತಗೊಳಿಸುವುದಕ್ಕಾಗಿ ಮನುಷ್ಯನನ್ನು ಬಲಿಕೊಡುವುದು;

(ii) ಈ ಅಧಿನಿಯಮದಲ್ಲಿ ಏನೇ ಇದ್ದರೂ, ಮನುಷ್ಯನನ್ನು ಬಲಿ ಕೊಡುವ ಆಚರಣೆಗೆ ಶಿಕ್ಷೆಯು ಮರಣ ಅಥವಾ ಆಜೀವ ಕಾರಾವಾಸ ಆಗಿರತಕ್ಕದ್ದು ಮತ್ತು ಜುಲ್ಮಾನೆಗೂ ಒಳಗಾಗತಕ್ಕದ್ದು.

(iii) ಮಾನುಷ್ಯ ಬಲಿಯಲ್ಲಿನ ನಂಬಿಕೆಯನ್ನು ಹರಡುವುದು ಅಥವಾ ಮಾನುಷ್ಯ ಬಲಿಕೊಡುವಂತೆ ಇತರರನ್ನು ಪ್ರೇರೇಪಿಸುವುದು.

(ಬಿ) ಕಾಯಿಲೆಯನ್ನು ಗುಣಪಡಿಸಲು ಪ್ರಯತ್ನಿಸುವುದು ಅಥವಾ ಹಿಂಸಾತ್ಮಕ ರೀತಿಯಿಂದ ಭೂತೋಚ್ಚಾಟನೆಯನ್ನು ನಡೆಸುವುದು.

(ಸಿ) (i) ಭಾರತ ದಂಡ ಸಂಹಿತೆ, 1860ರ 297ನೇ ಪ್ರಕರಣದ ಉಲ್ಲಂಘನೆಯಲ್ಲಿ ಅಘೋರಿ, ಸಿದ್ದುಭುಕ್ತಿ ಅಥವಾ ಸದೃಶ ಆಚರಣೆಯನ್ನು ನೆರವೇರಿಸುವುದು;

(ii) ಅಂಥ ಆಚರಣೆಗಳಲ್ಲಿ ತೊಡಗುವಂತೆ ಇತರರನ್ನು ಒತ್ತಾಯಿಸುವುದು; ಅಥವಾ

(iii) ಅಂಥ ಆಚರಣೆಗಳಿಂದ ಪಡೆಯಲಾಗಿದೆಯೆನ್ನಲಾದ ಶಕ್ತಿಯ ಭಯವನ್ನು ಉಪಯೋಗಿಸಿಕೊಂಡು ಆರ್ಥಿಕವಾಗಿ ಮತ್ತು ಲೈಂಗಿಕವಾಗಿ ವ್ಯಕ್ತಿಗಳ ಶೋಷಣೆ ಮಾಡುವುದು;

(ಡಿ) ದೈವಿಕ ಅಥವಾ ಅಧ್ಯಾತ್ಮಿಕ ಶಕ್ತಿ ಸ್ವಾಧೀನವಾಗಿದೆಯೆಂದು ಘೋಷಿಸುವುದು ಮತ್ತು ಅಂಥ ಘೋಷಣೆಯನ್ನು ಬಳಸಿಕೊಂಡು,

(i) ಹಣವನ್ನು ಪಡೆದು ಪರಿಹಾರಗಳ ಅಥವಾ ಲಾಭಗಳ ಭರವಸೆಯನ್ನು ಕೊಡುವುದು;

(iii) ಅಥವಾ ವೈಯಕ್ತಿಕ ಲಾಭಕ್ಕಾಗಿ ದೈವದ ಕೋಪದ ಅಥವಾ ಆತ್ಮದ ಖಂಡನೆಯ ಭಯವನ್ನು ಹುಟ್ಟಿಸುವುದು;

(ಇ) ಹಣಕ್ಕಾಗಿ ಅಥವಾ ಇಲ್ಲವೇ ಉಚಿತವಾಗಿ ವಾಮಾಚಾರವನ್ನು (ಬ್ಲ್ಯಾಕ್ ಮ್ಯಾಜಿಕ್) ಅಥವಾ ಮಾಟವನ್ನು ಇತರ ವ್ಯಕ್ತಿಗಳಿಗೆ ತೊಂದರೆಯುಂಟುಮಾಡುವ ಉದ್ದೇಶದಿಂದ ಮತ್ತು ಅವರಿಗೆ ತೀವ್ರವಾಗಿ ಭಯವುಂಟು ಮಾಡುವಂತೆ ಬಳಸುವುದು ಅಥವಾ ಮಾಡುವುದು;

(ಎಫ್) ದೇಹದೊಳಗೆ ಚುಚ್ಚಿಕೊಳ್ಳುವ ಕೊಕ್ಕೆಯಿಂದ ನೇತಾಡುವಂತಹ (ಸಿಡಿ) ಅಥವಾ ದೇಹದೊಳಗೆ ತೂರಿಸಿಕೊಂಡಿರುವ ಕೊಕ್ಕೆಯಿಂದ ರಥವನ್ನು ಎಳೆಯುವಂತಹ ಸ್ವ ದಂಡನೆಯಿಂದ ಗಾಯಗೊಳ್ಳುವ ಮತಾಚರಣೆಗಳನ್ನು ಆಚರಿಸುವಂತೆ ಒತ್ತಾಯಿಸುವುದು, ಹರಡುವುದು ಅಥವಾ ಅದಕ್ಕೆ ಅನುಕೂಲ ಕಲ್ಪಿಸುವುದು;

(ಜಿ) ಮಕ್ಕಳ ಕಾಯಿಲೆಯನ್ನು ವಾಸಿ ಮಾಡುವ ಹೆಸರಿನಲ್ಲಿ ಅವರನ್ನು ಮುಳ್ಳುಗಳ ಮೇಲೆ ಅಥವಾ ಎತ್ತರದಿಂದ ಎಸೆಯುವ ಮೂಲಕ ಅವರನ್ನು ಹಾನಿಗೊಳಪಡಿಸುವಂತಹ ಆಚರಣೆಗಳನ್ನು ಒತ್ತಾಯಿಸುವುದು, ಹರಡುವುದು ಮತ್ತು ಅಂತಹ ವಾತಾವರಣವನ್ನು ಕಲ್ಪಿಸುವುದು;

(ಎಚ್) ಮಹಿಳೆಯರ ವಿರುದ್ಧ ಮೂಢನಂಬಿಕೆ ಆಚರಣೆಗಳು;-

(i) ಋತುಮತಿಯಾದ ಅಥವಾ ಗರ್ಭಿಣಿ ಮಹಿಳೆಯರನ್ನು ಒತ್ತಾಯಪೂರ್ವಕವಾಗಿ ಒಂಟಿಯಾಗಿರಿಸುವುದು, ಗ್ರಾಮದೊಳಗೆ ಬಾರದಂತೆ ನಿಷೇಧಿಸುವುದು ಅಥವಾ ಬೇರೆ ಇರಿಸಲು ಅನುಕೂಲ ಕಲ್ಪಿಸುವುದು.

(ii) ಸಮಾಜದ ದುರ್ಬಲ ವರ್ಗಗಳ ಮಹಿಳೆಯರ ಮೇಲೆ ಬಣ್ಣದ ನೀರನ್ನು ಎರಚುವ, ಓಕುಳಿ, ಮೂಲಕ ಅವರನ್ನು ಅವಮಾನಗೊಳಿಸುವುದು ಅಥವಾ ಅವರ ಘನತೆಗೆ ಧಕ್ಕೆಯುಂಟು ಮಾಡುವುದು.

(iii) ಪೂಜೆ ಅಥವಾ ಇತರ ಯಾವುದೇ ಹೆಸರಿನಲ್ಲಿ ಅವರನ್ನು ಬೆತ್ತಲೆಯಾಗಿ ಪ್ರದರ್ಶಿಸುವುದು, ಉದಾಹರಣೆಗೆ ಬೆತ್ತಲೆ ಸೇವೆ ಅಂಥ ಅಮಾನವೀಯ ಮತ್ತು ಅವಮಾನಗೊಳಿಸುವ ಆಚರಣೆಗಳಿಗೆ ಮಹಿಳೆಯರನ್ನು ಒಳಪಡಿಸುವುದು.

(ಐ) ಗರ್ಭಿಣಿಯರನ್ನಾಗಿಸುವುದೂ ಸೇರಿದಂತೆ ಸಾಮಾಜಿಕ ಅಥವಾ ವೈಯಕ್ತಿಕ ಲಾಭವನ್ನು ಉಂಟುಮಾಡುವ ಭರವಸೆಯೊಂದಿಗೆ ಅತಿಮಾನುಷ ಶಕ್ತಿಯನ್ನು ಆಹ್ವಾನಿಸುವ ಮೂಲಕ ಮಹಿಳೆಯರನ್ನು ಲೈಂಗಿಕವಾಗಿ ಶೋಷಣೆಗೆ ಒಳಪಡಿಸುವುದು;

(i) ಸಾರ್ವಜನಿಕ ಆರೋಗ್ಯಕ್ಕೆ ಹಾನಿಯುಂಟುಮಾಡುವಂಥ, ಕತ್ತನ್ನು ಕಚ್ಚುವ ಮೂಲಕ ಪ್ರಾಣಿಗಳನ್ನು ಕೊಲ್ಲುವ ಆಚರಣೆಗಳನ್ನು (ಗಾವು) ನೆರವೇರಿಸುವಂತೆ ಯಾರೇ ವ್ಯಕ್ತಿಯನ್ನು ಒತ್ತಾಯಿಸುವುದು;

(ಜೆ) ಮಾನವ ಘನತೆಯನ್ನು ಉಲ್ಲಂಘಿಸುವಂತಹ ಮಡೆಸ್ನಾನ ಅಥವ ಸದೃಶ ಆಚರಣೆಗಳಿಗೆ ಅನುಕೂಲ ಕಲ್ಪಸುವುದು;

(ಕೆ) ಮೂಢನಂಬಿಕೆಯ ಹೆಸರಿನಲ್ಲಿ ಜಾತಿ ಅಥವಾ ಲಿಂಗದ ಆಧಾರದ ಮೇಲೆ ತಾರತಮ್ಯ ಕಲ್ಪಿಸುವುದು;

(i) ಪಾದರಕ್ಷೆಗಳನ್ನು ಅವನ/ ಅವಳ ತಲೆಯ ಮೇಲೆ ಒಯ್ಯುವ ಅವಮಾನಕರ ಆಚರಣೆಗಳನ್ನು ನೆರವೇರಿಸುವಂತೆ ಸಮಾಜದ ದುರ್ಬಲ ವರ್ಗಗಳಿಗೆ ಸೇರಿದ ಯಾರೇ ವ್ಯಕ್ತಿಯನ್ನು ಒತ್ತಾಯಿಸುವುದು;

(ii) ಆಹಾರ ವಿತರಣೆ ಮಾಡುವಾಗ ಜಾತಿಯ ಆಧಾರದ ಮೇಲೆ ಪಂಕ್ತಿಬೇಧ ಮಾಡುವಂತಹ ಆಚರಣೆಗಳನ್ನು ಮಾಡುವುದು;

2. ಈ ಮುಂದಿನ ಅಪರಾಧಗಳು ಸಂಜ್ಞೇಯವಲ್ಲದ ಅಪರಾಧಗಳಾಗಿರತಕ್ಕದ್ದು,-

(ಎ) (i) ಯಾರೇ ವ್ಯಕ್ತಿಯ ಜನನದ ಸಮಯ, ಸ್ಥಳದ ಆಧಾರದ ಮೇಲೆ ಅವನಿಗೆ ಕಳಂಕ ಹಚ್ಚುವುದಕ್ಕೆ ಅಥವಾ ಅವನನ್ನು ತೆಗಳುವುದಕ್ಕೆ;

(ii) ಭವಿಷ್ಯವಾಣಿ ನಿಜವಾಗುತ್ತದೆಂದು ನಂಬಿಸಿ ಅವಮಾನಕರ ಆಚರಣೆಗಳನ್ನು ವ್ಯಕ್ತಿಗಳಿಂದ ಮಾಡಿಸುವುದಕ್ಕೆ, ಅಥವಾ

(iii) ವ್ಯಕ್ತಿಗಳಿಗೆ ತೀವ್ರ ಹಣಕಾಸು ನಷ್ಟ ಉಂಟಾಗುವುದಕ್ಕೆ ಕಾರಣವಾಗುವ ಹಾನಿಕರ ಭವಿಷ್ಯ ನುಡಿಯುವುದು

(ಬಿ) ಜ್ವಾಲೆಯನ್ನು ಬರೀ ಕೈಗಳಿಂದ ಮುಟ್ಟುವಂತೆ ಒತ್ತಾಯಿಸುವ ರೀತಿಯ ದೈಹಿಕ ಅಥವಾ ಮಾನಸಿಕ ಹಾನಿಗೆ ಒಳಪಡಿಸುವ ಮೂಲಕ ಮಾಡುವ ಯಾರೇ ವ್ಯಕ್ತಿಯ ಅಪರಾಧವನ್ನು ಅಥವಾ ನಿರಪರಾಧಿತ್ವವನ್ನು ಘೋಷಿಸುವುದು;

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

1 ಸಾಮಾನ್ಯ ಜನತೆಗೆ ವಿಶೇಷವಾಗಿ ಸಮಾಜದ ದುರ್ಬಲ ವರ್ಗಗಳಲ್ಲಿ ತೀವ್ರ ಹಾನಿಯುಂಟುಮಾಡುವ ಮತ್ತು ಅವರ ಶೋಷಣೆಗೆ ಕಾರಣವಾಗುವ ಮೂಢನಂಬಿಕೆಗಳು ಅತಿ ಹೆಚ್ಚಿನ ಸಂಖ್ಯೆಯಲ್ಲಿ ರಾಜ್ಯದಾದ್ಯಂತ ಹರಡಿದೆ. ಮಾನವ ಘನತೆಗೆ ಧಕ್ಕೆಯುಂಟುಮಾಡುವ ಅಘೋರಿ, ಮಡೆಸ್ನಾನ, ಬೆತ್ತಲೆ ಸೇವೆ ಅಂಥ ಇತರ ಆಚರಣೆಗಳು ವ್ಯಾಪಕವಾಗಿ ಜಾರಿಯಲ್ಲಿದೆ. ಅದರ ಜೊತೆಗೇ ಬಲಿಯಾದವರ ಆರ್ಥಿಕ ಶೋಷಣೆಗೆ ಮತ್ತು ಮಾನಸಿಕ ಕ್ಷೋಭೆಗೆ ಕಾರಣವಾಗುವ ಅನೇಕ ರೀತಿಯ ಮೂಢನಂಬಿಕೆ ಆಚರಣೆಗಳು ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ರೂಢಿಯಲ್ಲಿವೆ. ಕಾನೂನಿನ ನಿಯಮವು ಅನ್ವಯಿಸುವ ನಾಗರಿಕ ಸಮಾಜದಲ್ಲಿ ಅಂಥ ಆಚರಣೆಗಳಿಗೆ ಸ್ಥಾನವಿಲ್ಲ.

2 ಘನತೆಯಿಂದ ಜೀವಿಸುವ ಹಕ್ಕು ಭಾರತದ ಸಂವಿಧಾನದ 21ನೇ ಅನುಚ್ಛೇದದಿಂದ ಕೊಡಲಾಗಿರುವ ಮತ್ತು ಭಾರತದ ಸರ್ವೋಚ್ಚ ನ್ಯಾಯಾಲಯದ ಅನೇಕ ತೀರ್ಪುಗಳಲ್ಲಿ ಪುಷ್ಟಿಗೊಂಡಿರುವ ಮೂಲಭೂತ ಹಕ್ಕು. ಅಂಥ ಆಚರಣೆಗಳು ವ್ಯಾಪಕವಾಗಿ ಜಾರಿಯಲ್ಲಿರುವುದರಿಂದ ಅಂಥ ಹಕ್ಕು ಸಂಪೂರ್ಣವಾಗಿ ಉಲ್ಲಂಘನೆಯಾಗುತ್ತಿದೆ. ಅಲ್ಲದೆ, ಎಲ್ಲ ವ್ಯಕ್ತಿಗಳು ಮನಃಸಾಕ್ಷಿ ಮತ್ತು ನಂಬಿಕೆಗಳನ್ನು ಹೊಂದಿರುವ ಸ್ವಾತಂತ್ರ್ಯವನ್ನು ಹೊಂದಿರಲು ಹಕ್ಕುಳ್ಳವರಾಗಿದ್ದರೂ ಕೆಲವು ಮೂಢನಂಬಿಕೆ ಆಚರಣೆಗಳು ಸಾರ್ವಜನಿಕ ಸುವ್ಯವಸ್ಥೆ, ನೈತಿಕತೆ ಹಾಗೂ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿವೆ. ಇಂಥ ಅನೇಕ ಇತ್ತೀಚಿನ ಪ್ರಕರಣಗಳು ಬೆಳಕಿಗೆ ಬಂದಿರುವುದರಿಂದ, ಈ ರೀತಿಯ ಮೂಢನಂಬಿಕೆ ಆಚರಣೆಗಳಿಂದಾಗುವ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸುವುದರ ಜೊತೆಗೆ ಅಂಥ ಆಚರಣೆಗಳನ್ನು ನಿರ್ದಿಷ್ಟವಾಗಿ ಅಪರಾಧಗಳೆಂದು ಗುರುತಿಸುವುದು ಅನಿವಾರ್ಯವಾಗಿದೆ. ಕರ್ನಾಟಕ ಮೂಢನಂಬಿಕೆ ಆಚರಣೆಗಳ ಪ್ರತಿಬಂಧಕ ವಿಧೇಯಕ, 2013 ಈ ಉದ್ದೇಶಗಳನ್ನು ಸಾಧಿಸಬಯಸುತ್ತದೆ.

3 ತಮಗಿದೆಯೆನ್ನಲಾಗುವ ಅತಿಮಾನಷ ಶಕ್ತಿಯನ್ನು ಆಹ್ವಾನಿಸಿ ಇತರ ವ್ಯಕ್ತಿಗಳ ಕಾಯಿಲೆಯನ್ನು ಗುಣಪಡಿಸುವ ಅಥವಾ ಲಾಭವುಂಟುಮಾಡುವ ಭರವಸೆ ನೀಡಿ ಅಥವಾ ಪ್ರತಿಕೂಲ ಪರಿಣಾಮ ಉಂಟಾಗುತ್ತದೆಂದು ಹೆದರಿಸಿ ಇತರರಿಗೆ ತೀವ್ರತರವಾದ ದೈಹಿಕ ಅಥವಾ ಮಾನಸಿಕ ಹಾನಿಯುಂಟುಮಾಡುವ, ಅವರನ್ನು ಆರ್ಥಿಕವಾಗಿ ಅಥವಾ ಲೈಂಗಿಕವಾಗಿ ಶೋಷಿಸುವ ಅಥವಾ ಅವರ ಮೂಲಭೂತ ಘನತೆಗೆ ಘಾಸಿಯುಂಟುಮಾಡುವ ಕೆಲವು ಮೂಢನಂಬಿಕೆ ಆಚರಣೆಗಳ ಉತ್ತೇಜನೆ, ಪ್ರಸಾರ ಅಥವಾ ನಡೆಸುವುದನ್ನು ಈ ವಿಧೇಯಕ ನಿರ್ದಿಷ್ಟ ಅಪರಾಧವನ್ನಾಗಿಸಲು ಉದ್ದೇಶಿಸುತ್ತದೆ. ಅಂಥ ಅಪರಾಧವನ್ನು ಎಸಗಿದವರಿಗೆ ಕಠಿಣ ಶಿಕ್ಷೆ ನೀಡುವುದರಿಂದ ಖಚಿತವಾಗಿ ಭಯ ಮೂಡಿಸುತ್ತದೆ ಮತ್ತು ಆ ಮೂಲಕ ಅವು ಮತ್ತೆ ಮರುಕಳಿಸದಂತೆ ತಡೆದು ಅವನ್ನು ನಿಧಾನವಾಗಿ ನಿರ್ಮೂಲನೆ ಮಾಡುವುದು ಸಾಧ್ಯವಾಗುತ್ತದೆ.

4 ಅದರ ಜೊತೆಗೆ ಅಂಥ ಆಚರಣೆಗಳಿಂದಾಗುವ ದುಷ್ಪರಿಣಾಮಗಳ ಬಗ್ಗೆ ಸಾಮಾನ್ಯ ಜನತೆಗೆ ತಿಳಿವಳಿಕೆ ಮೂಡಿಸುವುದೂ ಅಗತ್ಯ, ಮತ್ತು ಅಂಥ ಘಟನೆಗಳು

ಸಂಭವಿಸಿದಾಗ, ಅವುಗಳನ್ನು ವರದಿ ಮಾಡಲು ಒಂದು ವೇದಿಕೆ ಹೊಂದಿರುವುದೂ ಅಷ್ಟೇ ಅಗತ್ಯ. ಆದ್ದರಿಂದ, ಅಧಿನಿಯಮದ ಒಟ್ಟಾರೆ ಜಾರಿಯನ್ನು ಖಚಿತಗೊಳಿಸುವುದಕ್ಕೆ ಜವಾಬ್ದಾರವಾಗಿರುವ ರಾಜ್ಯಮಟ್ಟದ ನೋಡಲ್ ಪ್ರಾಧಿಕಾರವಾದ ಕರ್ನಾಟಕ ಮೂಢನಂಬಿಕೆ ವಿರೋಧಿ ಪ್ರಾಧಿಕಾರವನ್ನು ಸ್ಥಾಪಿಸಲು ವಿಧೇಯಕ ಉದ್ದೇಶಿಸುತ್ತದೆ. ಜಿಲ್ಲಾಮಟ್ಟದಲ್ಲಿ ಮೂಢನಂಬಿಕೆ ಆಚರಣೆಗಳ ಬಗೆಗಿನ ಜಾಗೃತ ಸಮಿತಿಗಳು ಪ್ರಾಧಿಕಾರಕ್ಕೆ ಪೂರಕವಾಗಿ ಕೆಲಸ ಮಾಡುತ್ತವೆ. ಇವು ದೂರುಗಳನ್ನು ಸ್ವೀಕರಿಸಬಹುದು, ಕುಂದುಕೊರತೆಗಳನ್ನು ನಿವಾರಿಸಬಹುದು, ತನಿಖೆ ಮತ್ತು ನ್ಯಾಯಿಕ ವ್ಯವಹರಣೆಗಳಲ್ಲಿ ಅಧಿಕಾರ ವ್ಯಾಪ್ತಿಯಿರುವ ಪೊಲೀಸರಿಗೆ ನೆರವು ನೀಡಬಹುದು, ತಾನೇ ಸ್ವತಃ ಸೂಕ್ತ ಕ್ರಮವನ್ನು ಕೈಗೊಳ್ಳಬಹುದು ಮತ್ತು ಮೂಢನಂಬಿಕೆ ಆಚರಣೆಗಳ ದುಷ್ಪರಿಣಾಮಗಳ ಬಗ್ಗೆ ಜನರಲ್ಲಿ ಅದರಲ್ಲೂ ಸಮಾಜದ ದುರ್ಬಲ ವರ್ಗದವರನ್ನು ಸಂವೇದನಾಶೀಲರನ್ನಾಗಿಸಲು ತಿಳಿವಳಿಕೆ ಮತ್ತು ಅರಿವು ಮೂಡಿಸುವ ಆಂದೋಲನಗಳನ್ನು ಕೈಗೊಳ್ಳಬಹುದು.

5 ಹೀಗೆ, ಈ ವಿಧೇಯಕ, ಭಾರತದ ಸಂವಿಧಾನದ 51ಎ(ಎಚ್) ಅನುಚ್ಛೇದದ ಅಡಿಯಲ್ಲಿ ಪ್ರತಿಯೊಬ್ಬ ನಾಗರಿಕನ ಮೂಲಭೂತ ಕರ್ತವ್ಯವಾಗಿರುವ ವೈಜ್ಞಾನಿಕ ಮನೋಧರ್ಮ, ಮನವಾಸಕ್ತಿ ಮತ್ತು ವಿಚಾರಿಸುವ ಹಾಗೂ ಸುಧಾರಿಸುವ ಸ್ವಭಾವವನ್ನು ಬೆಳೆಸಲು ಸಾಧ್ಯವಾಗುವಂತೆ ಮಾಡುತ್ತದೆ. ಜೊತೆ ಜೊತೆಯಲ್ಲೇ, ಮೂಢನಂಬಿಕೆ ಆಚರಣೆಗಳು ಮುಂದುವರಿಯದಂತೆ ತಡೆಗಟ್ಟುವ ಮೂಲಕ, ಭಾರತದ ಸಂವಿಧಾನದ ಅಡಿಯಲ್ಲಿ ಕೊಡಲಾಗಿರುವ ಘನತೆಯ ಜೀವನವನ್ನು ಸಾಗಿಸಲು ಸಾಧ್ಯವಾಗಿಸುತ್ತದೆ.

6 ವಿಧೇಯಕವು ಮೇಲಿನ ಉದ್ದೇಶಗಳನ್ನು ಸಾಧಿಸಲು ಬಯಸುತ್ತದೆ

****

ಪತ್ರಿಕಾ ತುಣುಕುಗಳು

ಅಪಾಯಕಾರಿ ಮೂಢನಂಬಿಕೆಯಿಂದ ಸಮಾಜದ ರಕ್ಷಣೆಗೆ ಪ್ರಗತಿಪರ ಚಿಂತಕರೊಂದಿಗೆ ನಾನು ಕೈ ಜೋಡಿಸಿದ್ದಕ್ಕೆ ಪಟ್ಟಭದ್ರ ಹಿತಾಸಕ್ತಿಗಳಿಂದ ನನಗೆ ಜೀವ ಬೆದರಿಕೆ ಕರೆಗಳು ಬರುತ್ತಿವೆ. ಪೂರ್ವಾಗ್ರಹ ಪೀಡಿತ ಕೆಲ ಮಠಾಧೀಶರು ಗೂಂಡಾ ಪದ್ಧತಿ ಹುಟ್ಟುಹಾಕುತ್ತಿದ್ದು, ನನ್ನನ್ನು ಗುರಿಯಾಗಿಟ್ಟುಕೊಂಡು ನನ್ನ ಧ್ವನಿ ದಮನ ಮಾಡಲು ಹೊರಟಿದ್ದಾರೆ. ಪ್ರಸ್ತಾಪಿತ ಮೂಢನಂಬಿಕೆ ಪ್ರತಿಬಂಧಕ ಕಾಯ್ದೆಯು ಹಿಂದೂಧರ್ಮ ಹಾಗೂ ಲಿಂಗಾಯತ ಧರ್ಮದ ವಿರೋಧಿ ಎಂದು ಆರೋಪಿಸಿ ರಂಭಾಪುರಿ ಶ್ರೀಗಳು ಅದರ ಜಾರಿಗೆ ಅಡ್ಡಗಾಲು ಹಾಕುತ್ತಿದ್ದಾರೆ' ಅಡ್ಡಪಲ್ಲಕ್ಕಿ, ಪಾದಪೂಜೆ, ಮಡೆಸ್ನಾನ ಇತ್ಯಾದಿ ಆಚರಣೆಗಳನ್ನು ಮೂಢನಂಬಿಕೆ ಕಾನೂನು ವ್ಯಾಪ್ತಿಗೆ ತರಬೇಕೆಂದು ರಾಜ್ಯದ ವಿವಿಧ ಸಮುದಾಯಗಳ ಮಠಾಧೀಶರು ಹಾಗೂ ನಮ್ಮ ಮಠದ ಗೋಡೆಗಳ ಮೇಲೆ ಭಿತ್ತಿಪತ್ರಗಳನ್ನು ಅಂಟಿಸಿ ಮಠದಿಂದ ಹೊರಹಾಕುವ ಹಾಗೂ ಜೀವ ಬೆದರಿಕೆ ಹಾಕುತ್ತಿದ್ದಾರೆ. ಇಂತಹ ಗೊಡ್ಡು ಬೆದರಿಕೆಗಳಿಗೆ ನಾನು ಜಗ್ಗುವುದಿಲ್ಲ.

– ನವೆಂಬರ್ 21.2013 ವಾರ್ತಾಭಾರತಿ.

ಜನರ ಆಚಾರ ವಿಚಾರ, ಧಾರ್ಮಿಕ ನಂಬಿಕೆಗಳಿಗೆ ಧಕ್ಕೆ ತರುವ ಯಾವುದೇ ಕಾನೂನು ನಿಲ್ಲಲು ಸಾಧ್ಯವಿಲ್ಲ. ಮೂಢನಂಬಿಕೆ ನಿಷೇಧ ಕಾನೂನನ್ನು ಜಾರಿಗೆ ತರಲು ಉದ್ದೇಶಿಸುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಹಿಂದೂ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರಲು ಹೊರಟಿರುವುದು ಸರಿಯಲ್ಲ. ಈಗ ತರಲು ಉದ್ದೇಶಿಸಿರುವ ವಿವಾದಿತ ವಿಧೇಯಕದಲ್ಲಿ ಸ್ವಾಮೀಜಿಗಳ ಪಾದಪೂಜೆ, ಶಂಕುಸ್ಥಾಪನೆ, ಅಡ್ಡಪಲ್ಲಕ್ಕಿ ಉತ್ಸವ ನಡೆಸಬಾರದು, ರುದ್ರಾಕ್ಷಿ ಧರಿಸಬಾರದು ಎಂಬಿತ್ಯಾದಿ ಅಂಶಗಳು ಇರುವುದು ಎಷ್ಟರಮಟ್ಟಿಗೆ ಸರಿ ? ಹಾಗಾದರೆ ನೀವು ಮುಖ್ಯಮಂತ್ರಿ ಕುರ್ಚಿಯಲ್ಲಿ ಕೂರುವಾಗ ಪೂಜೆ ಮಾಡಿಸಿದ್ದೇಕೆ ?

–ಕುಪ್ಪೂರು ಗದ್ದಿಗೆ ಮಠದ ಡಾ. ಯತೀಶ ಶಿವಾಚಾರ್ಯ ಸ್ವಾಮೀಜಿ.

ಮೂಢನಂಬಿಕೆ ಪ್ರತಿಬಂಧಕ ಕಾನೂನನ್ನು ಕೇವಲ ಹಿಂದೂಧರ್ಮಕ್ಕೆ ಸೀಮಿತಗೊಳಿಸದೆ ಎಲ್ಲ ಧರ್ಮಗಳಿಗೂ ಅನ್ವಯವಾಗುವಂತೆ ಜಾರಿಗೊಳಿಸಲಿ 'ಹಿಂದೂ, ಮುಸ್ಲಿಂ, ಕ್ರೈಸ್ತ, ಸಿಖ್ ಒಳಗೊಂಡಂತೆ ಎಲ್ಲಾ ಧರ್ಮಗಳಲ್ಲೂ ನಂಬಿಕೆ ಮತ್ತು ಆಚರಣೆಗಳಿವೆ. ಅವು ಜನರ ನಂಬಿಕೆಗೆ ಬಿಟ್ಟದ್ದು. ಒಂದು ವೇಳೆ ಸರಕಾರ ಮೂಢನಂಬಿಕೆ ಪ್ರತಿಬಂಧಕ ಕಾನೂನು ಜಾರಿಗೆ ತರುವುದೇ ಆದರೆ, ಎಲ್ಲಾ ಧರ್ಮಗಳಿಗೂ ಅನ್ವಯವಾಗುವ ರೀತಿಯಲ್ಲಿ ಕಾನೂನು ರಚಿಸಿ ಜಾರಿಗೊಳಿಸಲಿ. ಅದಕ್ಕೂ ಮುನ್ನ ಕಾಯಿದೆ ಕುರಿತು ಸಾರ್ವಜನಿಕವಾಗಿ ವ್ಯಾಪಕ ಚರ್ಚೆ ನಡೆಸಬೇಕು, "ಧರ್ಮ, ಆಚರಣೆ, ಸುಧಾರಣೆಗಳಿಗೆ ಸಂಬಂಧಿಸಿದಂತೆ ಸರಕಾರ ಯಾವುದೇ ಯೋಜನೆ ಜಾರಿಗೆ ತರಲು ಮುಂದಾದರೂ ಅದರಲ್ಲಿ ಹಿಂದೂಧರ್ಮಕ್ಕೆ ಧಕ್ಕೆಯಾಗುತ್ತದೆ. ಭೂಸುಧಾರಣೆ ಕಾಯಿದೆ ಜಾರಿಗೊಳಿಸಿ ಕೇವಲ ಹಿಂದೂ ದೇವಾಲಯಗಳನ್ನು ಮಾತ್ರವೇ ಕಿತ್ತುಕೊಂಡರು. ಇತರೆ ಧರ್ಮದವರಿಗೆ ಕಾಯಿದೆ ಅನ್ವಯಿಸಲಿಲ್ಲ" ಸರಕಾರ ಕೇವಲ ಹಿಂದೂಧರ್ಮಕ್ಕೆ ಮಾತ್ರವೇ ಈ ಕಾನೂನು ಜಾರಿಗೆ ತರುವುದಾದರೆ ಅದರ ವಿರುದ್ಧ ಕಾನೂನು ಹೋರಾಟ ಮಾಡಲಾಗುವುದು."

–ಕೊಳದಮಠದ ಡಾ. ಶಾಂತವೀರ ಸ್ವಾಮೀಜಿ, ವಿಕೆ ಸುದ್ದಿಲೋಕ ನವೆಂಬರ್ 25.2013

ಮಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೂಢನಂಬಿಕೆ ವಿರೋಧಿ ಕಾನೂನನ್ನು ಬೆಳಗಾವಿ ಅಧಿವೇಶನದಲ್ಲಿ ಮಂಡಿಸಲಿದ್ದೇವೆ ಎಂದು ನಾನು ಎಲ್ಲಿಯೂ ಹೇಳಿಲ್ಲ. ಮಸೂದೆ ಜಾರಿ ಕುರಿತು ಅದರ ಸಾಧಕ ಬಾಧಕಗಳ ಬಗ್ಗೆ ಚರ್ಚಿಸಿ, ಜನಾಭಿಪ್ರಾಯ ಸಂಗ್ರಹಿಸಿ ತೀರ್ಮಾನಿಸಲಾಗುವುದು.

–ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಜಾವಾಣಿ– ನವಂಬರ್ 13.2013

ಹಿಂದೂಗಳ ಭಾವನೆಗಳಿಗೆ ಧಕ್ಕೆ ತರುವಂತೆ ಸಿದ್ಧಪಡಿಸಿರುವ ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ 'ಮೂಢನಂಬಿಕೆ ನಿಷೇಧ ಮಸೂದೆ' ಜಾರಿಗೊಳಿಸಲು ಬಿಡುವುದಿಲ್ಲ. ಮುಖ್ಯಮಂತ್ರಿ ಸ್ಥಾನ ಮಕ್ಕಳಾಟವಲ್ಲ, ಜವಾಬ್ದಾರಿಯುತ ಹುದ್ದೆ ಎಂಬುದನ್ನು ಮರೆತು, ಹಿಂದೂಗಳ ಭಾವನೆಗಳಿಗೆ ಧಕ್ಕೆಯಾಗುವಂತೆ ಸಿದ್ಧಪಡಿಸಲಾಗಿರುವ ಮೂಢನಂಬಿಕೆ ನಿಷೇಧ ಮಸೂದೆಯನ್ನು ವಿರೋಧದ ನಡುವೆಯೂ ಜಾರಿಗೊಳಿಸಿದರೆ ಸಿದ್ದರಾಮಯ್ಯ ಮುಖ್ಯಮಂತ್ರಿ ಸ್ಥಾನ ಕಳೆದುಕೊಳ್ಳುತ್ತಾರೆ.

–ಮಾಜಿ ಉಪಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ ಪ್ರಜಾವಾಣಿ ನವೆಂಬರ್ 13.2013

ರಾಜ್ಯ ಸರ್ಕಾರ ಜಾರಿಗೆ ತರಲು ಹೊರಟಿರುವ ಮೂಢನಂಬಿಕೆ ನಿಷೇಧ ಮಸೂದೆ ಕೈ ಬಿಡುವ ಪ್ರಶ್ನೆಯೇ ಇಲ್ಲ. ಮುಂಬರುವ ಬೆಳಗಾವಿ ಅಧಿವೇಶನದಲ್ಲಿ ಮಸೂದೆ ಮಂಡನೆಗೆ ಸಿದ್ಧತೆ ನಡೆಸಿಕೊಳ್ಳಲಾಗಿದೆ. ಯಾವುದೇ ಕಾರಣಕ್ಕೂ ಮಸೂದೆ ಮಂಡಿಸುವ ನಿಲುವಿನಿಂದ ಹಿಂದೆ ಸರಿಯುವ ಉದ್ದೇಶ ಇಲ್ಲ. ಧಾರ್ಮಿಕ ಭಾವನೆಗಳಿಗೆ ಧಕ್ಕೆಯುಂಟಾಗದ ರೀತಿಯಲ್ಲಿ ಮಸೂದೆಯನ್ನು ಮಂಡಿಸಲಾಗುತ್ತದೆ. ಈ ಬಗ್ಗೆ ಸದನದಲ್ಲಿ ಚರ್ಚೆ ನಡೆಸಿದ ಬಳಿಕ ಮಸೂದೆ ಮಂಡನೆ ಮಾಡಲಾಗುತ್ತದೆ.

–ಕಾನೂನು ಸಚಿವ ಟಿ.ಬಿ.ಜಯಚಂದ್ರ, ಪ್ರಜಾವಾಣಿ ನವೆಂಬರ್ 10.2013

ಮೂಢನಂಬಿಕೆ ನಿಷೇಧ ಕಾಯ್ದೆ: ಸಿದ್ದು ನಡೆಗೆ ಕಾಂಗ್ರೆಸ್ಸಿನಲ್ಲೇ ವಿರೋಧ

ಮಾಟ–ಮಂತ್ರ, ಮೂಢನಂಬಿಕೆಗಳನ್ನು ನಿಷೇಧಿಸಲು ಹೊಸ ಕಾನೂನು ರಚನೆ ಮಾಡುವ ಅಗತ್ಯವಿಲ್ಲ. ಮೂಢನಂಬಿಕೆ ನಿಷೇಧ ಮಸೂದೆ ಮಂಡಿಸುವ ಅಗತ್ಯವಿಲ್ಲ. ಬದಲಾಗಿ ಈಗಿರುವ ಕಾನೂನನ್ನು ಸಮಗ್ರವಾಗಿ ಸರ್ಕಾರ ಬಳಸಿಕೊಂಡರೆ ಸಾಕು. ಕಾಯ್ದೆ ಮಸೂದೆ ಜಾರಿ ಮಾಡುವುದನ್ನು ಬಿಟ್ಟು ಅನಿಷ್ಠ ಪದ್ಧತಿಗಳ ವಿರುದ್ಧ ಜನರಲ್ಲಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಸರ್ಕಾರ ಹೆಚ್ಚು ಗಮನಹರಿಸಬೇಕು ಕಾನೂನು ಜಾರಿಗೆ ತರುವುದರಿಂದ ಪ್ರಯೋಜನವಿಲ್ಲ'

–ಹಿರಿಯ ಕಾಂಗ್ರೆಸ್ ನಾಯಕ ಜನಾರ್ಧನ ಪೂಜಾರಿ. ಪ್ರಜಾವಾಣಿ ನವೆಂಬರ್ 8.2013

ಮೂಢನಂಬಿಕೆಗಳ ನಿಷೇಧದ ಹೆಸರಿನಲ್ಲಿ ಹಿಂದೂಗಳ ಧಾರ್ಮಿಕ ಶ್ರದ್ಧೆಗಳನ್ನು ಕೆಣಕುವುದು ಸರಿಯಲ್ಲ. ಸಾಧು ಸಂತರ ಪಾದಪೂಜೆ, ಪಲ್ಲಕ್ಕಿ ಉತ್ಸವ ಸೇರಿದಂತೆ ಹಲವು ವಿಷಯಗಳು ಮೂಢನಂಬಿಕೆಯಲ್ಲದಿದ್ದರೂ ಅವುಗಳನ್ನು ನಿಷೇಧದ ಪಟ್ಟಿಯಲ್ಲಿ ಸೇರಿಸಲಾಗಿದೆ. ಆದ್ದರಿಂದ ಇದನ್ನು ಕಾಯ್ದೆಯಾಗಿ ಜಾರಿಗೊಳಿಸುವ ಮುನ್ನ ರಾಜ್ಯ ಸರ್ಕಾರ ಗಂಭೀರವಾಗಿ ಚಿಂತನೆ ನಡೆಸಬೇಕಿದೆ. ಕ್ರೈಸ್ತರ ಪಾಪ ಕಳೆಯುವ ಕನ್ಫೆಷನ್ ಬಾಕ್ಸ್, ಆಮಿಷದ ಮೂಲಕ ಮತಾಂತರಗೊಳಿಸುವುದು, ಮುಸ್ಲಿಂ ಹಬ್ಬಗಳಲ್ಲಿ ಗೋಹತ್ಯೆ, ಚರ್ಚ್‌ಗಳಲ್ಲಿ ಪ್ರೇತ ಬಿಡಿಸುವುದು, ಮೊಹರಂ ನಲ್ಲಿ ಹಿಂಸಾತ್ಮಕವಾಗಿ

ಮೈಗೆ ಚಾಕುವಿನಿಂದ ಇರಿದು ರಕ್ತಸಿಕ್ತಗೊಳಿಸಿ ನಡೆಸುವ ಮೆರವಣಿಗೆ, ಸಾಂಬ್ರಾಣಿ ಹೊಗೆ ಸೇರಿದಂತೆ ವಿವಿಧ ಧರ್ಮಗಳಲ್ಲಿ ಇರುವ ಮೂಢನಂಬಿಕೆ ಪದ್ಧತಿಯನ್ನು ನಿಷೇಧದ ಪಟ್ಟಿಯಲ್ಲಿ ಸೇರಿಸಬೇಕು, ಸುಧಾರಣೆ ಹೆಸರಿನಲ್ಲಿ ಧರ್ಮವನ್ನು ಕೆಣಕಿದರೆ ಸರ್ಕಾರ ಹಾಗೂ ಬುದ್ಧಿಜೀವಿಗಳು ಅದರ ಪರಿಣಾಮವನ್ನು ಎದುರಿಸಬೇಕಾಗುತ್ತದೆ. ಕಾಂಗ್ರೆಸ್ ಸರ್ಕಾರ ಮೂಢನಂಬಿಕೆ ನಿಷೇಧ ಕಾಯ್ದೆಯ ಕರಡು ಸಿದ್ಧಪಡಿಸುವ ಸಂದರ್ಭದಲ್ಲಿ ಹಿಂದೂಧರ್ಮದ ಧಾರ್ಮಿಕ ಮುಖಂಡರನ್ನು, ವಿವಿಧ ಸಂಪ್ರದಾಯದ ಸ್ವಾಮೀಜಿಗಳನ್ನು ಗಣನೆಗೆ ತೆಗೆದುಕೊಂಡು ಕರಡನ್ನು ಸಿದ್ಧಪಡಿಸಬೇಕಿತ್ತು ಆದರೆ, ಅವರನ್ನು ಹೊರತುಪಡಿಸಿ ನಾಸ್ತಿಕ ವ್ಯಕ್ತಿಗಳು ಸಿದ್ಧಪಡಿಸಿರುವ ಕಾನೂನನ್ನು ಜಾರಿಗೊಳಿಸಲು ಯತ್ನಿಸುತ್ತಿದೆ, ಒಂದು ವೇಳೆ ಕಾಯ್ದೆ ಯಥಾವತ್ತಾಗಿ ಜಾರಿಯಾದರೆ ಅದನ್ನು ಹಿಂಪಡೆಯುವವರೆಗೆ ಭಜರಂಗದಳ ರಾಜ್ಯಾದ್ಯಂತ ಹೋರಾಟ ನಡೆಸಲು ತೀರ್ಮಾನಿಸಿದೆ.

–ಭಜರಂಗದಳ ರಾಜ್ಯ ಸಂಚಾಲಕ ಸೂರ್ಯನಾರಾಯಣ. ಮಂಗಳೂರು ವ್ವಾಸ್. ನವೆಂಬರ್ 6.2013

ನಂಬಿಕೆಯನ್ನು ಅಪನಂಬಿಕೆ ಮಾಡುವುದು ಸಿದ್ದರಾಮಯ್ಯ ಚಾಳಿ. ಮಸೂದೆ ಹೆಸರಲ್ಲಿ ನಂಬಿಕೆಗಳ ಮೇಲೆ ಪ್ರಹಾರ ಸರಿಯಲ್ಲ. ಮೂಢನಂಬಿಕೆಗೆ ನಮ್ಮ ವಿರೋಧವಿದೆ. ಆದರೆ ನಂಬಿಕೆ ಮೇಲೆ ಪ್ರಹಾರ ಸರಿಯಲ್ಲ. ಬೆಳಗಾವಿ ಅಧಿವೇಶನದಲ್ಲಿ ಮೂಢನಂಬಿಕೆ ಆಚರಣೆ ಪ್ರತಿಬಂಧಕ ವಿಧೇಯಕದ ವಿರುದ್ಧ ಹೋರಾಟ ನಡೆಸಲು ಬಿಜೆಪಿ ನಿರ್ಧರಿಸಿದೆ. ಬಿಜೆಪಿ ಕಚೇರಿಯಲ್ಲಿ ನಡೆದ ಕೋರ್ ಕಮಿಟಿ ಸಭೆಯಲ್ಲಿ ಹೋರಾಟ ತೀವ್ರಗೊಳಿಸುವ ಬಗ್ಗೆ ನಿರ್ಣಯ ಕೈಗೊಳ್ಳಲಾಗಿದೆ.

–ಮಾಜಿ ಸಿಎಂ ಡಿ.ವಿ. ಸದಾನಂದಗೌಡ. ಪಬ್ಲಿಕ್ ಟಿವಿ

ಮೂಢನಂಬಿಕೆ ಆಚರಣೆ ಪ್ರತಿಬಂಧಕ ವಿಧೇಯಕ ಜಾರಿಯಿಂದ ಹಿಂದೂ ಧಾರ್ಮಿಕ ಪದ್ಧತಿಗಳನ್ನು ಕಾಂಗ್ರೆಸ್ ವಿರೋಧಿಸಿದಂತಾಗುತ್ತದೆ. ಕಾಂಗ್ರೆಸ್ ನಿಲುವನ್ನು ಬಿಜೆಪಿ ವಿರೋಧಿಸುತ್ತದೆ, ಅದರ ವಿರುದ್ಧ ಹೋರಾಟ ನಡೆಸುತ್ತದೆ.

–ಸಂಸದ ಅನಂತಕುಮಾರ್. ಪಬ್ಲಿಕ್ ಟಿವಿ

ಕಾಂಗ್ರೆಸ್ ಸರ್ಕಾರ ಜಾರಿ ಮಾಡಲಿರುವ ಮಾಟ ಮಂತ್ರ ನಿಷೇಧ ಕಾಯ್ದೆಯನ್ನು ತೀವ್ರವಾಗಿ ವಿರೋಧಿಸಿದ್ದಾರೆ. ತಾಕತ್ತಿದ್ದರೆ ಕಾಂಗ್ರೆಸ್ ಸರ್ಕಾರ ಮೂಢನಂಬಿಕೆ ನಿಷೇಧ ಕಾಯ್ದೆ ಮಂಡಿಸಿ ಅನುಮೋದನೆ ಪಡೆಯಲಿ ವರ್ಷಾನುಗಟ್ಟಲೆಗಳಿಂದ ಬಂದಿರುವ ಸಂಪ್ರದಾಯ ಮುರಿಯಬಾರದು ಜನರ ನಂಬಿಕೆಗಳಿಗೆ ಧಕ್ಕೆ ಮಾಡಿ, ನೋವು ಉಂಟುಮಾಡಬಾರದು ನಿಮ್ಮ ಹೆಂಡತಿ ಮನೆಯಲ್ಲಿ ಪೂಜೆ ಮಾಡುವುದಿಲ್ಲವಾ......? ನಿಮ್ಮ ಸಚಿವರು ಕಚೇರಿಗಳಲ್ಲಿ ಪೂಜೆ ಮಾಡಲಿಲ್ಲವಾ...........?

–ಕೆಜೆಪಿ. ರಾಜ್ಯಾಧ್ಯಕ್ಷ. ಬಿ.ಎಸ್.ಯಡಿಯೂರಪ್ಪ . ಪಬ್ಲಿಕ್ ಟಿವಿ

ರಾಜ್ಯದಲ್ಲಿ ಬಹಳಷ್ಟು ಸಮಸ್ಯೆಗಳು ಉಲ್ಬಣಿಸಿ ಪರಿಹರಿಸಲಾರದೆ ಇರುವ ಸ್ಥಿತಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮೂಢನಂಬಿಕೆಗಳನ್ನು ಶಾಶ್ವತವಾಗಿ ಹತ್ತಿಕ್ಕುವುದಾಗಿ ಹೇಳಿದ್ದು, ಅದಕ್ಕಾಗಿ ಕಾನೂನನ್ನು ಅನುಷ್ಠಾನಕ್ಕೆ ತರಲು ಮುಂದಾಗಿರುವುದು ಎಷ್ಟರ ಮಟ್ಟಿಗೆ ಸರಿ ಎಂಬುದನ್ನು ಅವರೇ ಹೇಳಬೇಕಿದೆ. ರಾಜ್ಯದಲ್ಲಿ ಬಹಳಷ್ಟು ಸಮಸ್ಯೆಗಳು ಉಲ್ಬಣಿಸಿ ಪರಿಹರಿಸಲಾರದೆ ಇರುವ ಸ್ಥಿತಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮೂಢನಂಬಿಕೆಗಳನ್ನು ಶಾಶ್ವತವಾಗಿ ಹತ್ತಿಕ್ಕುವುದಾಗಿ ಹೇಳಿದ್ದು ಅದಕ್ಕಾಗಿ ಕಾನೂನನ್ನು ಅನುಷ್ಠಾನಕ್ಕೆ ತರಲು ಮುಂದಾಗಿರುವುದು ಎಷ್ಟರ ಮಟ್ಟಿಗೆ ಸರಿ ಎಂಬುದನ್ನು ಅವರೇ ಹೇಳಬೇಕಿದೆ.

–ಜೆಡಿಎಸ್ ಶಾಸಕ. ಎಚ್.ಡಿ.ರೇವಣ್ಣ. ಉದಯವಾಣಿ. ನವೆಂಬರ್ 12.2013



